ಸಂಪುಟ : 9 ಸಂಚಿಕೆ 283 ಪುಟ : 4+2 ಬೆಲೆ: 3.00 ರವಿವಾರ ಡಿಸೆಂಬರ್ 22 2024 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ

Volume : 9 Issue : 283 Pages : 4+2 Price : 3.00 Sunday December 22 2024 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25




## ಪೊಲೀಸ್ ಇಲಾಖೆಯಿಂದ 'ವಿಶ್ವ ಧ್ಯಾನ ದಿನಾಚರಣೆ'

■ವಿಜಯಸಾಕ್ಷಿ ಸುದ್ದಿ, ಗದಗ

ವಿಶ್ವ ಆರೋಗ್ಯ ಸಂಸ್ಥೆಯು ಧ್ಯಾನ ಹಾಗೂ ಯೋಗದಿಂದ ವ್ಯಕ್ತಿ ಮನಸ್ಸಿನ ಮೇಲೆ ಆಗುವ ಪರಿಣಾಮಗಳನ್ನು ಅಧ್ಯಯನ ಮಾಡಿ, ಅದರಿಂದ ಆಗುವ ಲಾಭಗಳನ್ನು ಗಮನದಲ್ಲಿಟ್ಟುಕೊಂಡು ಡಿಸೆಂಬರ್ 21, 2024ರಿಂದ ಪ್ರತಿ ವರ್ಷ ಇಂಟರ್‌ನ್ಯಾಶನಲ್ ಮೆಡಿಟೇಷನ್ ಡೇ ಆಚರಿಸಬೇಕೆಂದು ಘೋಷಿಸಿದೆ.

ಈ ನಿಟ್ಟಿನಲ್ಲಿ ಗದಗ ಜಿಲ್ಲೆಯ ಪೊಲೀಸ್ ಇಲಾಖೆಯಿಂದ ಶನಿವಾರ ಇಲ್ಲಿನ ಸಂಭಾಪುರ ರಸ್ತೆಯಲ್ಲಿನ ಪೊಲೀಸ್ ಭವನದಲ್ಲಿ ವಿಶ್ವ ಧ್ಯಾನ ದಿನಾಚರಣೆಯನ್ನು ಆಯೋಜಿಸಲಾಗಿತ್ತು. ವಾಲಿ ಗುರೂಜಿ ಅವರು ವಿಶ್ವ ಧ್ಯಾನ ದಿನಾಚರಣೆ ಕುರಿತು ತಿಳುವಳಿಕೆ ನೀಡಿದರು.

ಕಾರ್ಯಕ್ರಮದಲ್ಲಿ ಪೊಲೀಸ್ ಅಧೀಕ್ಷಕ ಐಪಿಎಸ್ ಬಿ.ಎಸ್. ನೇಮಗೌಡ, ಹೆಚ್ಚುವರಿ ಪೊಲೀಸ್ ಅಧೀಕ್ಷಕ ಎಂ.ಬಿ. ಸಂಕದ, ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ | 2ನೇ ದಿನದ ಗೋಷ್ಠಿಯಲ್ಲಿ ಸಚಿವ ಎಚ್.ಕೆ. ಪಾಟೀಲ ಅಭಿಪ್ರಾಯ

# ಸಾಹಿತ್ಯದಿಂದ ರಾಜಕೀಯ ಬದಲಾವಣೆ ಸಾಧ್ಯ

■ವಿಜಯಸಾಕ್ಷಿ ಸುದ್ದಿ, ಮಂಡ್ಯ

ಸಾಹಿತ್ಯದ ಮೂಲಕ ರಾಜಕಾರಣವನ್ನು ಬದಲಾಯಿಸಲು ಸಾಧ್ಯವಿದೆ. ಸಾಹಿತ್ಯ ಕ್ಷೇತ್ರದಲ್ಲಿರುವವರು ರಾಜಕಾರಣಕ್ಕೆ ಸೂಕ್ತ ಮಾರ್ಗದರ್ಶನ ಮಾಡಬೇಕಿದೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ ಅಭಿಪ್ರಾಯಪಟ್ಟರು.

87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ 2ನೇ ದಿನವಾದ ಶನಿವಾರ ರಾಜಮಾತೆ ಕೆಂಪನಂಜಮ್ಮಣಿ ಮತ್ತು ರಾಜಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಪ್ರಧಾನ ವೇದಿಕೆಯಲ್ಲಿ ನಡೆದ 'ಸಾಹಿತ್ಯದಲ್ಲಿ ರಾಜಕೀಯ: ರಾಜಕೀಯದಲ್ಲಿ ಸಾಹಿತ್ಯ' ಕುರಿತ ಗೋಷ್ಠಿಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.


ರಾಜ-ಮಹಾರಾಜರ ಕಾಲದಿಂದಲೂ ಸಾಹಿತ್ಯ ಪೋಷಣೆಯಾಗುತ್ತಿದೆ. ರಾಜಕಾರಣದ ಮೇಲೆ ಸಾಹಿತ್ಯ ಸಾಕಷ್ಟು ಪ್ರಭಾವ ಉಂಟುಮಾಡಿದೆ. ಸಾಹಿತಿಗಳೂ ಆಗಿದ್ದ ಗಾಂಧೀಜಿಯವರ ಚಿಂತನೆಗಳು ಸಮಾಜದ ಬದಲಾವಣೆಗೆ ಕಾರಣವಾಗಿವೆ. ವಿಧಾನಸಭೆ, ವಿಧಾನಪರಿಷತ್ತಿನಲ್ಲಿ ಮಾಡಲಾಗುವ ಮೌಲಿಕ ಭಾಷಣವನ್ನು ಸಾಹಿತ್ಯದ ಭಾಗವಾಗಿ ಏಕೆ ಪರಿಗಣಿಸಬಾರದು? ನೆಹರೂ ಅವರು ಸಂಸತ್ತಿನಲ್ಲಿ ಮಾಡಿದ ಭಾಷಣ ಮೈ ನವಿರೇಳಿಸುತ್ತದೆ. ರಾಜಕಾರಣ ಮತ್ತು ಸಾಹಿತ್ಯಕ್ಕೂ ಸಂಬಂಧ ಇಲ್ಲ ಎನ್ನಬಾರದೆಂಬ ಅನಿಸಿಕೆಯನ್ನು ಸಚಿವರಾದ ಎಚ್.ಕೆ. ಪಾಟೀಲ ವ್ಯಕ್ತಪಡಿಸಿದರು.



ರಾಜಕಾರಣಿಗಳಿಗಿರಬೇಕಾದ ಸಾಹಿತ್ಯ ಪ್ರಜ್ಞೆ ಕುರಿತು ವಿಷಯ ಮಂಡನೆ ಮಾಡಿದ ರಾಜಕೀಯ ಚಿಂತಕರಾದ ಡಾ. ಕೆ. ಅನ್ನದಾನಿ ಅವರು, ಅನುಭವ ಮಂಟಪ ಎಂಬ ಮೊದಲ ಸಂಸತ್ತು ರಚಿಸಿದ ಹೆಗ್ಗಳಿಕೆ ಬಸವಣ್ಣನವರದ್ದು. ಅವರು ತಾರತಮ್ಯವನ್ನು ಹೋಗಲಾಡಿಸಿದರು. ನಾನೂ ಕೂಡ ಸಾಹಿತ್ಯದೊಂದಿಗೆ ನಂಟು ಇಟ್ಟುಕೊಂಡಿದ್ದೇನೆ ಎಂದರು

ರಾಜಕೀಯ ವಿಶ್ಲೇಷಕರಾದ ರವೀಂದ್ರ ರೇಷ್ಮೆ ಅವರು ಸಾಹಿತ್ಯ ಕೃತಿಗಳಲ್ಲಿ ಕಂಡು ಬರುವ ರಾಜಕೀಯ ಚಿತ್ರಣ ಕುರಿತು ವಿಷಯ ಮಂಡನೆ ಮಾಡಿದರು. ಕಾರ್ಯಕ್ರಮದಲ್ಲಿ ಸಮ್ಮೇಳನದ ಅಧ್ಯಕ್ಷರಾದ ನಾಡೋಜ ಡಾ. ಗೊ.ರು. ಚನ್ನಬಸಪ್ಪ, ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷರಾದ ಡಾ. ಮಹೇಶ್ ಜೋಶಿ, ಶಾಸಕರಾದ ನರೇಂದ್ರಸ್ವಾಮಿ, ಜಿಲ್ಲಾಧಿಕಾರಿಗಳಾದ ಕುಮಾರ ಸೇರಿದಂತೆ ಇನ್ನಿತರ ಗಣ್ಯಮಾನ್ಯರು ಉಪಸ್ಥಿತರಿದ್ದರು.

ಆಶಯ ನುಡಿಗಳನ್ನಾಡಿದ ರಾಜಕೀಯ ಚಿಂತಕರಾದ ಬಿ.ಎಲ್. ಶಂಕರ್, ಗಾಂಧೀಜಿ ಅವರ ವಿಚಾರ, ಡಾ. ಬಿ.ಆರ್. ಅಂಬೇಡ್ಕರ್ ಅವರ ವಿದ್ವತ್ತು ಸಾಹಿತ್ಯ ರಚನೆ ಚಿಂತನೆ ಮೇಲೆ ಅಗಾಧ ಪರಿಣಾಮ ಬೀರಿವೆ. ಸ್ವಾತಂತ್ರ್ಯ ಮತ್ತು ಸ್ವಾತಂತ್ರ್ಯದ ನಂತರ ಅನೇಕ ರಾಜಕೀಯ ಬರಹಗಳನ್ನು ನಾವು ಕಾಣಬಹುದು. ರಾಜಕಾರಣದ ಮೇಲೆ ಪ್ರಭಾವ ಬೀರಿದ ಅಂಕಣಕಾರರನ್ನು ನೋಡಿದ್ದೇವೆ ಎಂದರು.



## ಇಂದಿನ ನೀರು ಪೂರೈಕೆ ವಿವರ

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ-ಬೆಟಗೇರಿ ಅವಳಿ ನಗರದಲ್ಲಿ ಡಿಸೆಂಬರ್: 22 ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು ಎಂದು ನಗರಸಭೆ ಅಧಿಕಾರಿಗಳು ತಿಳಿಸಿದ್ದಾರೆ.

ಸ್ಥಳಗಳ ವಿವರ: ವಾರ್ಡ್ ನಂ. 1ರಲ್ಲಿ ಎಸ್.ಎಮ್. ಕೃಷ್ಣ ನಗರದ ಎಲ್ಲ ಭಾಗಗಳು, ವಾರ್ಡ್ ನಂ.16, 21 22- ಸುಣ್ಣದ ಭಟ್ಟಿ ಭಾಗ-1, 2 ಕುಷ್ಠ ರೋಗ ಕಾಲೋನಿ, ಅಂಬೇಡ್ಕರ್ ನಗರ, ಉಳಿದ ಕೆಲವು ಭಾಗಗಳು. ವಿಜಯನಗರ ಶಾಲೆ, ಕರುಗಲ್ ಲೇಔಟ್, ಶಿಗ್ಗಾಂವಿ ಲೇಔಟ್ ಕಮತರ ಪ್ಲಾಟ್, ವಾಲ್ಮೀಕಿ ಭವನ ಉಳಿದ ಕೆಲವು ಭಾಗಗಳು.

ವಾರ್ಡ್ ನಂ. 5,6,10 ರಲ್ಲಿ ನರಸಾಪೂರ ಆಶ್ರಯ ಕಾಲೋನಿಯ ಅರ್ಧಭಾಗ, ಸಿಹಿ ನೀರಿನ ಬಾವಿಯ 4 ಭಾಗಗಳು, ಯರಗಟ್ಟಿ ಅವರ ಲೈನ್, ಮಾನೆದ ಅವರ ಲೈನ್, ಮಲ್ಲಿಕಾರ್ಜುನ ಗುಡಿ ಮಾನೇದ ಲೇಔಟ್,

ಪ್ರಕಟಣೆ: ಅವಳಿ ನಗರದ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ತಮ್ಮ ನೀರಿನ ಕರವನ್ನು ತುಂಬಲು ನಗರಸಭೆ ಅಧಿಕಾರಿಗಳು ತಿಳಿಸಿದ್ದಾರೆ. ಒಂದು ವೇಳೆ ಬಾಕಿ ಉಳಿದ ನೀರಿನ ಬಿಲ್ ತುಂಬದೇ ಹೋದರೆ, ನಳಗಳನ್ನು ಬಂದ ಮಾಡಲಾಗುವುದು.

ಹೀಗಾಗಿ ನೀರಿನ ಕರ ತುಂಬಲು ಸಾರ್ವಜನಿಕರಿಗೆ ನಗರಸಭೆ ಅಧಿಕಾರಿಗಳು ಪ್ರಕಟಣೆ ಮೂಲಕ ತಿಳಿಸಿದ್ದಾರೆ.

ನರೇಗಲ್ಲ ಪ.ಪಂ ಅಧ್ಯಕ್ಷ, ಉಪಾಧ್ಯಕ್ಷರ ವಿರುದ್ಧ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಪ್ರಕರಣ ದಾಖಲು

# ಜ.2ರಂದು 6 ಸದಸ್ಯರ ವಿಚಾರಣೆ

■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಸ್ಥಳೀಯ ಪಟ್ಟಣ ಪಂಚಾಯಿತಿಗೆ 2ನೇ ಅವಧಿಗಾಗಿ ಸೆ. 2ರಂದು ನಡೆದ ಚುನಾವಣೆಯಲ್ಲಿ ಬಿಜೆಪಿಯಿಂದ ಬಂಡಾಯ ಎದ್ದು ಕಾಂಗ್ರೆಸ್ ಪಕ್ಷದ ಸದಸ್ಯರ ಬೆಂಬಲ ಪಡೆದು ಸ್ಪರ್ಧಿಸಿ, ಅಧ್ಯಕ್ಷ ಸ್ಥಾನಕ್ಕೇರಿದ 15ನೇ ವಾರ್ಡಿನ ಬಿಜೆಪಿ ಸದಸ್ಯ ಫಕೀರಪ್ಪ ಮಳ್ಳಿ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೇರಿದ 17ನೇ ವಾರ್ಡಿನ ಬಿಜೆಪಿ ಸದಸ್ಯ ಕುಮಾರಸ್ವಾಮಿ ಕೋರಧಾನ್ಯಮಠ ಅವರ ವಿರುದ್ಧ ಸೇರಿದಂತೆ ಬಿಜೆಪಿಯ ಇತರೆ ನಾಲ್ಕು ಜನ ಸದಸ್ಯರ ವಿರುದ್ಧ ಗದಗ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಸದಸ್ಯತ್ವ ರದ್ದು ಪಡಿಸುವಂತೆ ಆಗ್ರಹಿಸಿ ಗದಗ ಜಿಲ್ಲಾ ಬಿಜೆಪಿ ಅಧ್ಯಕ್ಷರಿಂದ ಪ್ರಕರಣ ದಾಖಲಾಗಿದೆ.

ಇದರ ವಿಚಾರಣೆಯು 2025ರ ಜನವರಿ 2ರಂದು ಮಧ್ಯಾಹ್ನ 4 ಗಂಟೆಗೆ ನಡೆಯಲಿದೆ. ವಿಚಾರಣೆಗೆ ಸೂಕ್ತ ದಾಖಲೆಗಳೊಂದಿಗೆ ಹಾಜರಾಗುವಂತೆ ಆರು ಜನ ಸದಸ್ಯರಿಗೆ ನೋಟಿಸ್ ಜಾರಿ ಮಾಡಲಾಗಿದೆ.

ಗದಗ ಜಿಲ್ಲಾ ಬಿಜೆಪಿ ಅಧ್ಯಕ್ಷ ತೋಟಪ್ಪ (ರಾಜು) ಕುರಡಗಿ ಅವರು ನರೇಗಲ್ ಪಟ್ಟಣ ಪಂಚಾಯಿತಿಯ 6ನೇ ವಾರ್ಡಿನ ಸದಸ್ಯೆ ವಿಜಯಲಕ್ಷ್ಮೀ ಚಲವಾದಿ, 12ನೇ ವಾರ್ಡಿನ ಸದಸ್ಯ ಮಲ್ಲಿಕಸಾಬ್ ರೋಣದ, 13ನೇ ವಾರ್ಡಿನ ಸದಸ್ಯ ಈರಪ್ಪ ಜೋಗಿ, 14ನೇ ವಾರ್ಡಿನ ಸದಸ್ಯ ಫಕೀರಪ್ಪ ಬಂಬ್ಲಾಪುರ, 15ನೇ ವಾರ್ಡಿನ ಸದಸ್ಯ ಫಕೀರಪ್ಪ ಮಳ್ಳಿ, 17ನೇ ವಾರ್ಡಿನ ಸದಸ್ಯ ಕುಮಾರಸ್ವಾಮಿ ಕೋರಧಾನ್ಯಮಠ ಇವರ ವಿರುದ್ಧ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) ಕಾಯ್ದೆ 1987ರ ಕಲಂ 4ರಡಿ ಸದಸ್ಯತ್ವ ರದ್ದು ಪಡಿಸುವಂತೆ ಪ್ರಕರಣ ದಾಖಲಿಸಿದ್ದಾರೆ. ಹಾಗಾಗಿ ಅಧಿಕಾರ ಪಡೆದು ಕಾರ್ಯಕ್ರಮಗಳ ಚಾಲನೆ, ಉದ್ಘಾಟನೆ ಹಾಗೂ ಇತರೆ ಕೆಲಸಗಳಲ್ಲಿ ನಿರತರಾಗಿದ್ದ ಆರು ಸದಸ್ಯರಿಗೆ ಚಿಂತೆ ಶುರುವಾಗಿದೆ.





ಸದ್ಯ ನ್ಯಾಯವಾದಿಗಳ ಮೂಲಕ ಅಥವಾ ತಾವೇ ಖುದ್ದಾಗಿ ವಿಚಾರಣೆಗೆ ಹಾಜರಾಗಬೇಕು, ಇಲ್ಲವಾದರೆ ಅರ್ಹತೆಗಳ ಆಧಾರದ ಮೇಲೆ ನಿಖಾಲಿ ಮಾಡಲಾಗುವುದು ಅಥವಾ ಮುದ್ದತ್ತಿನ ದಿನಾಂಕವನ್ನು ತಿಳಿದುಕೊಳ್ಳಬೇಕು ಎಂದು ಡಿ. 19ರಂದು ಹೊರಡಿಸಲಾದ ನೋಟಿಸ್‌ನಲ್ಲಿ ಕಾಣಿಸಲಾಗಿದೆ.


ಅಧ್ಯಕ್ಷ-ಉಪಾಧ್ಯಕ್ಷರ ಚುನಾವಣೆಗೆ ಸಾಮಾನ್ಯ ಮಿಸಲಾತಿ ಎಂದು ದಿನಾಂಕ ನಿಗದಿಯಾದ ಬಿಜೆಪಿಯ ಆರು ಜನ ಸದಸ್ಯರು ಸೆ.1ರವರೆಗೂ ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ಸಂಪರ್ಕಕ್ಕೆ ಸಿಗದಂತಿದ್ದರು. ಅಂದು ರಾತ್ರಿ ರೋಣ ಮಂಡಲ ಬಿಜೆಪಿ ಅಧ್ಯಕ್ಷ ಮುತ್ತಣ್ಣ ಕಡಗದ ಅವರ ನೇತೃತ್ವದಲ್ಲಿ ಬಿಜೆಪಿ ತನ್ನ ಆರು ಜನ ಸದಸ್ಯರಿಗೆ ವಿಪ್ ಜಾರಿ ಮಾಡಿತ್ತು. ಹಾಗಾಗಿ ಗೊಂದಲದ ವಾತಾವರಣ ನಿರ್ಮಾಣವಾಗಿತ್ತು. ಚುನಾವಣೆಯಂದು ಬಿಗಿ ಪೊಲೀಸ್ ಬಂದೋಬಸ್ತ್‌ನಲ್ಲಿ ಬಂದು ನಾಮಪತ್ರ ಸಲ್ಲಿಸಿ, ಕಾಂಗ್ರೆಸ್ ಪಕ್ಷದ ಸದಸ್ಯರ ಬೆಂಬಲ ಪಡೆದು ಆಯ್ಕೆಯಾದವರು ಈಗ ಪ್ರಕರಣವನ್ನು ಹೇಗೆ ನಿಭಾಯಿಸುತ್ತಾರೆ ಎನ್ನುವ ಕುತೂಹಲ ಜನರಲ್ಲಿ ಮೂಡಿದೆ.

ರೋಣ ಮಂಡಲ ಬಿಜೆಪಿ ಅಧ್ಯಕ್ಷ ಮುತ್ತಣ್ಣ ಕಡಗದ, ಬಿಜೆಪಿ ಪಕ್ಷದ ಚಿಹ್ನೆಯ ಮೇಲೆ ಆರಿಸಿ ಬಂದಿರುವ 6 ಬಿಜೆಪಿ ಸದಸ್ಯರು, ಕಾಂಗ್ರೆಸ್ ಪಕ್ಷದ ಪರವಾಗಿ ಕೆಲಸ ಮಾಡಿದ್ದಾರೆ. ಕಾಂಗ್ರೆಸ್ ಪಕ್ಷದ ಶಾಲು ಹಾಕಿಕೊಂಡಿರುವ, ಧ್ವಜ ಹಿಡಿದಿರುವ ಫೋಟೋ, ವಿಡಿಯೋ ನಮ್ಮ ಬಳಿ ಇವೆ. ಅಷ್ಟೇ ಅಲ್ಲದೆ ಅವರು ನಮ್ಮ ಪಕ್ಷದಲ್ಲಿದ್ದು ಕಾಂಗ್ರೆಸ್ ಪರವಾಗಿ ಮಾಡಿರುವ ಕೆಲಸಗಳ ಆಧಾರ ಸಹಿತ ನ್ಯಾಯಾಲಯಕ್ಕೆ ಹೋಗಿದ್ದೇವೆ. ಆದ್ದರಿಂದ ಪಕ್ಷಾಂತರ ವಿರೋಧಿ ಕಾನೂನಿನಂತೆ ತಕ್ಕ ಶಿಕ್ಷೆಗೆ ಒಳಗಾಗಬೇಕಾಗುತ್ತದೆ ಎಂದು ಹೇಳಿದರು.

ಈ ಕುರಿತು ಪ್ರತಿಕ್ರಿಯೆ ನೀಡಿದ ಪ.ಪಂ ಅಧ್ಯಕ್ಷ ಫಕೀರಪ್ಪ ಮಳ್ಳಿ, ನಮಗೆ ನೋಟಿಸ್ ಇನ್ನೂ ತಲುಪಿಲ್ಲ, ಅದರಲ್ಲಿ ಏನಿದೆ ಎಂಬುದೂ ಗೊತ್ತಿಲ್ಲ. ನಾವಿನ್ನೂ ಬಿಜೆಪಿಗರೇ. ನರೇಂದ್ರ ಮೋದಿ, ಯಡಿಯೂರಪ್ಪ ಮತ್ತು ಬಸವರಾಜ ಬೊಮ್ಮಾಯಿಯವರೇ ನಮ್ಮ ನಾಯಕರು ಎಂದಿದ್ದಾರೆ.

ಉಪಾಧ್ಯಕ್ಷ ಕುಮಾರಸ್ವಾಮಿ ಕೋರಧಾನ್ಯಮಠ ಮಾತನಾಡಿ, ನಾವು ಬಿಜೆಪಿ ಪಕ್ಷದ ವಿರುದ್ಧ ಯಾವುದೇ ರೀತಿಯ ಪಕ್ಷ ವಿರೋಧಿ ಚಟುವಟಿಕೆಗಳನ್ನು ಮಾಡಿಲ್ಲ. ಯಾವುದೇ ಪಕ್ಷಕ್ಕೂ ಸೇರ್ಪಡೆಯಾಗಿಲ್ಲ. ಆದರೆ ಸ್ಥಳೀಯ ನಾಯಕರ ಸಹಕಾರ ಸಿಗದ ಕಾರಣ ಇತರ ಸದಸ್ಯರ ಬೆಂಬಲ ಪಡೆದು ಆಯ್ಕೆಯಾಗಿದ್ದೇವೆ. ಹಾಗಾಗಿ ನಾವು ನೋಟಿಸ್ ಬಂದ ನಂತರ ಕಾನೂನು ಹೋರಾಟಕ್ಕೆ ಮುಂದಾಗುತ್ತೇವೆ ಎಂದು ತಿಳಿಸಿದ್ದಾರೆ.

## ಶ್ರೀ ಗವಿಮಠ ಜಾತ್ರೆಗೆ ವಿಶೇಷ ಆಹ್ವಾನ



■ವಿಜಯಸಾಕ್ಷಿ ಸುದ್ದಿ, ಕೊಪ್ಪಳ

ಸಂಸ್ಥಾನ ಶ್ರೀ ಗವಿಮಠ ಜಾತ್ರೆಯು ಪ್ರತಿ ವರ್ಷ ವಿಭಿನ್ನ, ವಿಶಿಷ್ಟ ರೂಪದಲ್ಲಿ, ಅರ್ಥಪೂರ್ಣವಾಗಿ ಜರುಗುತ್ತಿದೆ. ಆಧುನಿಕತೆಯ ಸ್ಪರ್ಶದ ಜೊತೆಗೆ ಶ್ರೀಮಠದ ಭಕ್ತರಿಗೆ 2025ರ ಮಹಾಜಾತ್ರೋತ್ಸವದ ಆಹ್ವಾನವನ್ನು ನೇರವಾಗಿ ತಲುಪಿಸುವ ಸತ್ಕಾರ್ಯದಲ್ಲಿ ತೊಡಗಿದೆ.

ಅದಕ್ಕೆ ಈ ಬಾರಿಯೂ ಜನೇವರಿ 15, 16 ಹಾಗೂ 17ರಂದು ನಡೆಯುವ ಅಜ್ಜನ ಜಾತ್ರೆಗೆ ಭಕ್ತರನ್ನು ಆಹ್ವಾನಿಸುವ ದೃಶ್ಯವನ್ನು ಡ್ರೋಣ್ ಕ್ಯಾಮರಾದ ಮೂಲಕ ಸೆರೆಹಿಡಿದು, ಅಜ್ಜನ ಜಾತ್ರೆಗೆ ಬನ್ನಿ ಎಂದು ಆಹ್ವಾನ ನೀಡಲಾಗಿದೆ. ಈ ಚಿತ್ರವನ್ನು ಶ್ರೀ ಮಠದ ಉಚಿತ ವಸತಿ ಹಾಗೂ ಪ್ರಸಾದ ನಿಲಯ ಕಟ್ಟಡದ ಮುಂಭಾಗದ ವಿಶಾಲವಾದ ಆವರಣದಲ್ಲಿ ಸೆರೆ ಹಿಡಿಯಲಾಗಿದೆ.

ಮುಸ್ಸಂಜೆಯ ಹೊತ್ತಿನಲ್ಲಿ ಸೆರೆ ಹಿಡಿದ ಈ ಚಿತ್ರವು ಅತ್ಯಂತ ಮನೋಹರವಾಗಿದೆ. ಮುಗ್ದ ಮನಸ್ಸಿನ ಶ್ರೀ ಮಠದ ಉಚಿತ ವಸತಿ ಹಾಗೂ ಪ್ರಸಾದ ನಿಲಯದ ಸುಮಾರು 1500 ಮಕ್ಕಳು ಮೇಣದಬತ್ತಿ ಬೆಳಗುವದರ ಮೂಲಕ 'ಅಜ್ಜನ ಜಾತ್ರೆಗೆ ಬನ್ನಿ' ಎಂದು ಭಕ್ತರನ್ನು ಆಹ್ವಾನಿಸುವ ಸನ್ನಿವೇಶ ಅನನ್ಯವಾದುದು.

ಶಾಲಾ ಶಿಕ್ಷಣ ಇಲಾಖೆ (ಪ.ಪೂ) ಉಪನಿರ್ದೇಶಕ ಎಸ್.ಬಿ. ಮಸನಾಯಕ್ ಮಾಹಿತಿ

# ರಾಜ್ಯಮಟ್ಟದ ಫ್ಲೋರ್ ಬಾಲ್ ಪಂದ್ಯಾವಳಿ ನಾಳೆಯಿಂದ

■ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ರಾಜ್ಯ ಪದವಿಪೂರ್ವ ಕಾಲೇಜುಗಳ ರಾಜ್ಯಮಟ್ಟದ ಫ್ಲೋರ್ ಬಾಲ್ ಪಂದ್ಯಾವಳಿಗಳು ಇದೇ ಡಿ. 23 ಹಾಗೂ 24ರಂದು ನಡೆಯಲಿದೆ ಎಂದು ಶಾಲಾ ಶಿಕ್ಷಣ ಇಲಾಖೆ (ಪದವಿಪೂರ್ವ) ಉಪನಿರ್ದೇಶಕ ಎಸ್.ಬಿ. ಮಸನಾಯಕ್ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಾಲಾ ಶಿಕ್ಷಣ ಇಲಾಖೆ (ಪದವಿಪೂರ್ವ), ಜಿಲ್ಲಾ ಪ.ಪೂ ಕಾಲೇಜುಗಳ ಪ್ರಾಚಾರ್ಯರ ಸಂಘ, ಪ.ಪೂ ಮಹಾವಿದ್ಯಾಲಯಗಳ ನೌಕರರ ಸಂಘ, ಉಪನ್ಯಾಸಕರ ಸಂಘ, ದೈಹಿಕ ಶಿಕ್ಷಣ ಉಪನ್ಯಾಸಕರ ಸಂಘ, ಪ.ಪೂ ಶಿಕ್ಷಣ ಇಲಾಖೆ ಬೋಧಕೇತರ ಸಂಘದ ಆಶ್ರಯದಲ್ಲಿ ಈ ಪಂದ್ಯಾವಳಿಯನ್ನು ಆಯೋಜಿಸಲಾಗಿದೆ ಎಂದರು.

ಡಿ. 22ರಂದು ಸಂಜೆ 4 ಗಂಟೆಗೆ ಜಿಲ್ಲಾ ಕ್ರೀಡಾಂಗಣದಲ್ಲಿ ನೋಂದಣಿ ವ್ಯವಸ್ಥೆ ಕಲ್ಪಿಸಲಾಗಿದೆ. ಬಾಲಕರು ಮತ್ತು ಬಾಲಕಿಯರಿಗೆ ಪ್ರತ್ಯೇಕ ಊಟ, ವಸತಿ ವ್ಯವಸ್ಥೆ, ನೋಂದಾಯಿತ ಸ್ಥಳಗಳಿಗೆ ತೆರಳಲು ವಾಹನ ಸೌಕರ್ಯ ಕಲ್ಪಿಸಲಾಗಿದೆ. ಇದು ರಾಜ್ಯಮಟ್ಟಕ್ಕೆ ಸೀಮಿತವಾದ ಕ್ರೀಡೆಯಾಗಿದೆ. ಹೀಗಾಗಿ ಮುಂದಿನ ದಿನಗಳಲ್ಲಿ ಗದಗ ಸಹಿತ ರಾಜ್ಯದ ಎಲ್ಲ ಜಿಲ್ಲೆಗಳಿಂದಲೂ ತಂಡಗಳು ಆಗಮಿಸಲಿವೆ ಎಂದು ವಿವರಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಜಿ.ಎನ್. ಕುರ್ತಕೋಟಿ, ಎಂ.ಸಿ. ಕಟ್ಟಿಮನಿ, ಎನ್.ಎಂ. ಪವಾಡಿಗೌಡ್ರ, ಅಶೋಕ ಅಂಗಡಿ, ಎಸ್.ಎಸ್. ಸೋಮಣ್ಣವರ, ವೈ.ಸಿ. ಪಾಟೀಲ, ಬಿ.ಜಿ. ಗಿರಿತಮ್ಮಣ್ಣವರ, ವಿ.ಎಂ. ಪಾಟೀಲ, ವಿ.ಎಸ್. ದಬಾಲಿ, ಅರ್ಜುನ ಗೊಳಸಂಗಿ, ದತ್ತಪ್ರಸನ್ ಪಾಟೀಲ, ಎಂ.ಕೆ. ಲಮಾಣಿ, ಎಚ್.ಎಸ್. ಶಿವಪ್ಪಯ್ಯನಮಠ, ವೈ.ಎಸ್. ಹುನಗುಂದ ಉಪಸ್ಥಿತರಿದ್ದರು.




ಹಿಂದಿನ ವರ್ಷ ರಾಜ್ಯಮಟ್ಟದದ ಹಾಕಿ ಪಂದ್ಯಾವಳಿಯನ್ನು ಯಶಸ್ವಿಯಾಗಿ ಆಯೋಜಿಸಲಾಗಿತ್ತು. ಈ ವರ್ಷ ಫ್ಲೋರ್ ಬಾಲ್ ಪಂದ್ಯಾವಳಿ ನಡೆಸುವ ಅವಕಾಶ ಒದಗಿಬಂದಿದೆ. ಈವರೆಗೆ 15 ಬಾಲಕರು ಮತ್ತು ಬಾಲಕಿಯರ ತಂಡ ಒಳಗೊಂಡು 500 ಜನ ಸ್ಪರ್ಧಿಗಳು ನೋಂದಣಿ ಮಾಡಿಕೊಂಡಿದ್ದು, ಇನ್ನಷ್ಟು ತಂಡಗಳು ಭಾಗವಹಿಸುವ ನಿರೀಕ್ಷೆಯಿದೆ ಎಂದು ಎಸ್.ಬಿ. ಮಸನಾಯಕ್ ತಿಳಿಸಿದರು.

## ಶ್ರೀ ನಾಗದೇವತಾ ಕಾರ್ತಿಕೋತ್ಸವ ಇಂದು



■ ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಕುಮಾರವ್ಯಾಸ ರಸ್ತೆಯ ಶಾಲೆ ನಂ.2ರ ಬಳಿಯ ಶ್ರೀ ನಾಗದೇವತಾ ದೇವಸ್ಥಾನದಲ್ಲಿ ಡಿ.22ರಂದು ಮುಂಜಾನೆ 11:30ಕ್ಕೆ ವೀರೇಶ್ವರ ಪುಣ್ಯಾಶ್ರಮದ ಪೀಠಾಧಿಪತಿಗಳಾದ ಪರಮಪೂಜ್ಯ ಶ್ರೀ ಕಲ್ಲಯ್ಯಜ್ಜನವರ ಸಾನ್ನಿಧ್ಯದಲ್ಲಿ ಹಾಗೂ ಸಂಜೆ 7ಕ್ಕೆ ಮಹಾಪೂಜೆ, ಕಾರ್ತಿಕೋತ್ಸವ, ಅನ್ನಸಂತರ್ಪಣೆ ನೆರವೇರಲಿದೆ.

ಶ್ರೀ ಗುರೂಜಿ ಮೇಲೋಡಿ ಇವೆಂಟ್ಸ್ ವತಿಯಿಂದ ಸಾಂಸ್ಕೃತಿಕ ಕಾರ್ಯಕ್ರಮವನ್ನು ಶ್ರೀ ನಾಗೇಶ್ವರ ಮಿತ್ರ ಮಂಡಳಿ ವತಿಯಿಂದ ಹಮ್ಮಿಕೊಳ್ಳಲಾಗಿದ್ದು, ಸಕಲ ಸದ್ಭಕ್ತರು ಕಾರ್ತಿಕೋತ್ಸವ ಕಾರ್ಯಕ್ರಮಕ್ಕೆ ಅಗಮಿಸಿ ಪ್ರಸಾದ ಸ್ವೀಕರಿಸಿ ದೇವರ ಕೃಪೆಗೆ ಪಾತ್ರರಾಗಬೇಕೇಂದು ಶ್ರೀ ನಾಗೇಶ್ವರ ಮಿತ್ರ ಮಂಡಳಿಯ ಅಧ್ಯಕ್ಷ ವಿಶ್ವನಾಥ ಅಂಗಡಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ದೀಪಾ ತಟ್ಟಿಮನಿಯವರಿಗೆ ಪಿಎಚ್‌ಡಿ



■ ವಿಜಯಸಾಕ್ಷಿ ಸುದ್ದಿ, ವಿಜಯಪುರ

ದೀಪಾ ತಟ್ಟಿಮನಿ ಅವರು ಸಲ್ಲಿಸಿದ್ದ 'ಇಂಪಾಕ್ಟ್ ಆಫ್ ಡಿಜಿಟಲ್ ಇಂಡಿಯಾ ಆನ್ ವುಮೆನ್: ಎ ಕೇಸ್ ಸ್ಟಡಿ ಆಫ್ ಕರ್ನಾಟಕ ಸ್ಟೇಟ್' ಕುರಿತು ಸಲ್ಲಿಸಿದ್ದ ಮಹಾಪ್ರಬಂಧಕ್ಕೆ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯವು ಪಿಎಚ್‌ಡಿ ಪದವಿ ನೀಡಿದೆ. ದೀಪಾ ತಟ್ಟಿಮನಿ ಅವರು ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಪ್ರೊ. ಓಂಕಾರಗೌಡ ಕಾಕಡೆ ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ಕೈಗೊಂಡಿದ್ದರು. ಡಾಕ್ಟರೇಟ್ ಪದವಿ ಪಡೆದಿರುವ ದೀಪಾ ತಟ್ಟಿಮನಿ ಅವರನ್ನು ಕುಲಪತಿ ಪ್ರೊ. ಬಿ.ಕೆ. ತುಳಸಿಮಾಲ, ಕುಲಸಚಿವ ಶಂಕರಗೌಡ ಸೋಮನಾಳ, ಮೌಲ್ಯಮಾಪನ ಕುಲಸಚಿವ ಪ್ರೊ. ಎಚ್.ಎಂ. ಚಂದ್ರಶೇಕರ ಅಭಿನಂದಿಸಿದ್ದಾರೆ.

### ಧರ್ಮ ಸಂವರ್ಧನಾ ಸಮಾರಂಭದಲ್ಲಿ ಶ್ರೀ ರಂಭಾಪುರಿ ಡಾ.ವೀರಸೋಮೇಶ್ವರ ಜಗದ್ಗುರುಗಳು

# ಆತ್ಮವಿಶ್ವಾಸದಿಂದ ಬಾಳಿದರೆ ಜಯ ನಿಶ್ಚಿತ

■ ವಿಜಯಸಾಕ್ಷಿ ಸುದ್ದಿ, ಬೇಲೂರು

ಪ್ರಯತ್ನಶೀಲ ಮನುಷ್ಯನಿಗೆ ಜಯ ನಿಶ್ಚಿತ. ಹಣದ ಕೊರತೆ ಇದ್ದರೂ ಗುಣದ ಕೊರತೆ ಇರಬಾರದು. ಹಣೆಬರಹದಲ್ಲಿ ಭವಿಷ್ಯವಿಲ್ಲ. ಹಣೆಯ ಬೆವರಿನಲ್ಲಿ ಉಜ್ವಲ ಭವಿಷ್ಯ ಇದೆ ಎಂಬುದನ್ನು ಮರೆಯಬಾರದೆಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ.ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ಶುಕ್ರವಾರ ಸಮೀಪದ ಶ್ರೀಮದ್ರಂಭಾಪುರಿ ಶಾಖಾ ಕಾರ್ಜುವಳ್ಳಿ ಹಿರೇಮಠದಲ್ಲಿ ಜರುಗಿದ ಧರ್ಮ ಸಂವರ್ಧನಾ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

ನಿಜವಾದ ಸಂಬಂಧಗಳು ಸಮಯ ಮತ್ತು ಗೌರವ ಹೊರತುಪಡಿಸಿ ಬೇರೇನನ್ನೂ ಬಯಸುವುದಿಲ್ಲ. ಎಷ್ಟೇ ಸಮಸ್ಯೆಗಳು ಬಂದರೂ ಆತ್ಮ ವಿಶ್ವಾಸದಿಂದ ಬಾಳಿದರೆ ಜಯ ನಿಶ್ಚಿತ. ಬದುಕು ಹೇಗೆ ಸಾಗಿಸುವುದೆಂದು ಭಯಪಡಬಾರದು. ಗೂಡಿನಿಂದ ಹೊರಕ್ಕೆ ಹೋಗುವ ಪಕ್ಷಿಗೆ ಕಾಳುಗಳು ಎಲ್ಲಿವೆ ಎಂದು ಗೊತ್ತಿರುವುದಿಲ್ಲ. ಆದರೂ ಹಾರುತ್ತಾ ಹೋಗಿ ತನ್ನ ಆಹಾರವನ್ನು ಪಡೆಯುತ್ತದೆ. ಮನುಷ್ಯ ಸಹ ಕ್ರಿಯಾಶೀಲನಾಗಿ ಶ್ರಮದಿಂದ ದುಡಿದರೆ ಜೀವನ ಸಮೃದ್ಧಗೊಳ್ಳುವುದರಲ್ಲಿ ಅನುಮಾನವಿಲ್ಲ.





ನೇತೃತ್ವ ವಹಿಸಿದ ಕಾರ್ಜುವಳ್ಳಿ ಹಿರೇಮಠದ ಸದಾಶಿವ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ, ಬದುಕಿನ ವಿಕಾಸಕ್ಕೆ ಆಧ್ಯಾತ್ಮದ ಅರಿವು ಮತ್ತು ಗುರು ಮಾರ್ಗದರ್ಶನ ಅವಶ್ಯಕ. ವೀರಶೈವ ಧರ್ಮದಲ್ಲಿ ಸಂಸ್ಕಾರಕ್ಕೆ ಬಹಳಷ್ಟು ಮಹತ್ವವನ್ನು ಕೊಟ್ಟಿದ್ದಾರೆ. ಲಿಂ. ರುದ್ರಮುನಿ ಶಿವಾಚಾರ್ಯ ಸ್ವಾಮಿಗಳವರ 46ನೇ ವರ್ಷದ ಪುಣ್ಯ ಸ್ಮರಣೋತ್ಸವ, ಭದ್ರಕಾಳಿ ಸಮೇತ ಶ್ರೀ ವೀರಭದ್ರಸ್ವಾಮಿ ಕಲ್ಯಾಣ ಮಹೋತ್ಸವ ಹಮ್ಮಿಕೊಂಡಿದ್ದು ಸಮಾಧಾನ ತಂದಿದೆ ಎಂದ ಅವರು, ಇದೇ ಸಂದರ್ಭದಲ್ಲಿ ಪಟ್ಟಾಧಿಕಾರದ 4ನೇ ವರ್ಷದ ವರ್ಧಂತಿ ಜನ್ಮ ದಿನೋತ್ಸವ ಶ್ರೀ ರಂಭಾಪುರಿ ಜಗದ್ಗುರುಗಳ ಸಾನ್ನಿಧ್ಯದಲ್ಲಿ ಜರುಗುತ್ತಿರುವುದು ನಮ್ಮ ಸೌಭಾಗ್ಯವಾಗಿದೆ ಎಂದರು.

ಕಡೇನಂದಿಹಳ್ಳಿ ರೇವಣಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳು ಸಮಾರಂಭವನ್ನು ಉದ್ಘಾಟಿಸಿದರು. ನಾಗವಂದ, ಹಾರನಹಳ್ಳಿ, ಕೆಸವತ್ತೂರು, ತೇಜೂರು ಶ್ರೀಗಳು ಉಪಸ್ಥಿತರಿದ್ದರು. ಸಂಸದ ಶ್ರೇಯಸ್ ಪಟೇಲ್ ಅಧ್ಯಕ್ಷತೆ ವಹಿಸಿದ್ದರು. ಆಲೂರಿನ ಮಹೇಶ್ ಎಂ.ಎಸ್. ಇವರಿಗೆ ಧರ್ಮ ಹಿತಚಿಂತಕ ಪ್ರಶಸ್ತಿಯನ್ನು ಶ್ರೀ ರಂಭಾಪುರಿ ಜಗದ್ಗುರುಗಳು ಪ್ರದಾನ ಮಾಡಿ ಆಶೀರ್ವದಿಸಿದರು. ಇದೇ ಸಂದರ್ಭದಲ್ಲಿ ಎ.ಎನ್. ರೇಣುಕಪ್ರಸಾದ್, ಅನಿಲ್ ಬೂದಿಹಾಲ್, ಚನ್ನಬಸಪ್ಪ ಹೆದ್ದುರ್ಗ ಇವರಿಗೆ ಗೌರವ ಗುರುರಕ್ಷೆ ನೀಡಲಾಯಿತು.

ಶಾಸಕ ಸಿಮೆಂಟ್ ಮಂಜು ಮುಖ್ಯ ಅತಿಥಿಗಳಾಗಿದ್ದರು. ಮಹೇಶ್ ಚಿಕ್ಕೊಟೆ ಸ್ವಾಗತಿಸಿದರು. ಹಾಸನ ಗ್ಯಾಸ್‌ನ ಮಂಜುನಾಥ ಪ್ರಾರ್ಥಿಸಿದರು. ಮೈತ್ರಿ ಎಸ್.ಮಾದಗುಂಡಿ ಇವರಿಂದ ಭರತನಾಟ್ಯ ಪ್ರದರ್ಶನ, ಕಾರ್ಜುವಳ್ಳಿ ದೇವಿಕ ಕುಮಾರ್ ಇವರಿಂದ ನಿರೂಪಣೆ ನಡೆಯಿತು.

ವೀರಶೈವ ಧರ್ಮದಲ್ಲಿ ಕಾಯಕ ಜೀವನಕ್ಕೆ ಶ್ರೀ ಜಗದ್ಗುರು ರೇಣುಕಾಚಾರ್ಯರು ಬೋಧಿಸಿದ್ದಾರೆ. ಅದೇ ದಾರಿಯಲ್ಲಿ ಶರಣರು ಶ್ರಮಿಸಿ ದುಡಿಮೆಯ ಮಹತ್ವವನ್ನು ಸಾರಿದ್ದಾರೆ. ಕಾರ್ಜುವಳ್ಳಿ ಹಿರೇಮಠದ ಸದಾಶಿವ ಶಿವಾಚಾರ್ಯ ಸ್ವಾಮಿಗಳು ಆಧ್ಯಾತ್ಮ ಜೀವಿಗಳಾಗಿದ್ದು, ಭಕ್ತ ಸಮುದಾಯಕ್ಕೆ ಸಂಸ್ಕಾರ ಮತ್ತು ಮಾರ್ಗದರ್ಶನ ಮಾಡುತ್ತಿರುವುದು ಅತ್ಯಂತ ಸಂತೋಷವನ್ನು ಉಂಟು ಮಾಡಿದೆ. ಗುರು ಪರಂಪರೆಯ ಆದರ್ಶ ವಿಚಾರಧಾರೆಗಳನ್ನು ಜನಮನಕ್ಕೆ ಮುಟ್ಟಿಸಿದ ಶ್ರೇಯಸ್ಸು ಅವರದಾಗಿದೆ ಎಂದು ಹರುಷ ವ್ಯಕ್ತ ಪಡಿಸಿ, ಶ್ರೀ ಪೀಠದಿಂದ ರೇಶ್ಮೆ ಮಡಿ ಸ್ಮರಣಿಕೆ, ಫಲ-ಪುಷ್ಪವಿತ್ತು ಶ್ರೀ ರಂಭಾಪುರಿ ಡಾ.ವೀರಸೋಮೇಶ್ವರ ಜಗದ್ಗುರುಗಳು ಶುಭ ಹಾರೈಸಿದರು.

## ಡಿ.24ರಂದು ನೇರ ಸಂದರ್ಶನ

■ ವಿಜಯಸಾಕ್ಷಿ ಸುದ್ದಿ, ಗದಗ

ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ, ಗದಗ ವತಿಯಿಂದ ನೇರ ಸಂದರ್ಶನವಿದ್ದು ದಿನಾಂಕ: 24-12-2024, ಮಂಗಳವಾರ ರಂದು ಬೆಳಗ್ಗೆ 10 ಗಂಟೆಗೆ ಕ್ರೆಡಿಟ್ ಎಕ್ಸೆಸ್ ಗ್ರಾಮೀಣ ಲಿಮಿಟೆಡ್ ಗದಗ ಮೊದಲನೆ ಮಹಡಿ ಯುನಿಯನ್ ಬ್ಯಾಂಕ್ ಮೇಲುಗಡೆ ರಿಲಯನ್ಸ್ ಟ್ರೆಂಡ್ಸ್ ಹತ್ತಿರ ಮುಳಗುಂದ ರೋಡ್ ಗದಗ, ಇಲ್ಲಿ ನೇರ ಸಂದರ್ಶನ ಹಮ್ಮಿಕೊಳ್ಳಲಾಗಿದೆ.

ಈ ನೇರ ಸಂದರ್ಶನದಲ್ಲಿ ಈ ಕೆಳಗಿನ ಕಂಪನಿಗಳು ಭಾಗವಹಿಸಲಿದೆ. ಕ್ರೆಡಿಟ್ ಎಕ್ಸೆಸ್ ಗ್ರಾಮೀಣ ಲಿಮಿಟೆಡ್ ( ರಿಟೇಲ್ ಫೈನಾನ್ಸ್ ) ಗದಗ

ವಿದ್ಯಾರ್ಹತೆ : ಪಿ,ಯು.ಸಿ ( 10+2) ,ಡಿಪ್ಲೋಮಾ ಮತ್ತು ಯಾವುದೇ ಪದವಿ. ಹುದ್ದೆ : ರಿಲೇಷನಶಿಪ್ ಆಫೀಸರ್ (ಮಾರ್ಡಗೇಜ್ ಲೋನ್) ಕಡ್ಡಾಯವಾಗಿ ದ್ವಿಚಕ್ರ ವಾಹನ ಹೊಂದಿರಬೇಕು.

ವಯಸ್ಸು : ಪುರುಷ 19 ರಿಂದ 29, ಮಹಿಳೆ 19 ರಿಂದ 35.

ನೇರ ಸಂದರ್ಶನದಲ್ಲಿ ಪಾಲ್ಗೊಳ್ಳುವ ಅಭ್ಯರ್ಥಿಗಳು ತಮ್ಮ ವಿದ್ಯಾರ್ಹತೆಯ ಅಂಕಪಟ್ಟಿಗಳ ಝೆರಾಕ್ಸ್ ಪ್ರತಿಗಳು, 2 ರೆಸ್ಯೂಮೆ(ಬಯೋಡಾಟಾ)ಪ್ರತಿಗಳು, ಮತ್ತು ಆಧಾರ್ ಕಾರ್ಡ್ ಝೆರಾಕ್ಸ್‌ದಿಗೆ ಭಾಗವಹಿಸಬಹುದು. ನೇರ ಸಂದರ್ಶನದಲ್ಲಿ ಭಾಗವಹಿಸಿದ ಅಭ್ಯರ್ಥಿಗಳಿಗೆ ನೋಂದಣಿ ಕಡ್ಡಾಯವಾಗಿರುತ್ತದೆ. ಹಾಗೂ ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ ಸಂಖ್ಯೆ, 6363330688, 8762039729 ಕ್ಕೆ ಸಂಪರ್ಕಿಸಲು ಕೋರಲಾಗಿದೆಯೆಂದು ಜಿಲ್ಲಾ ಉದ್ಯೋಗಾಧಿಕಾರಿಯಾದ ಬಸವಂತ ಪಿ ಎನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ನೇರ ಸಂದರ್ಶನದಲ್ಲಿ ಭಾಗವಹಿಸುವ ಅಭ್ಯರ್ಥಿಗಳು ನೋಂದಣಿಯನ್ನು ನೇರ ಸಂದರ್ಶನದ ದಿನದಂದೇ ಮಾಡಿಸಬೇಕಾಗಿದೆ.

## ನೇಕಾರರ ಬದುಕು ಸುಧಾರಣೆಯಾಗಲಿ

■ ವಿಜಯಸಾಕ್ಷಿ ಸುದ್ದಿ, ಗದಗ

ಇತ್ತೀಚಿನ ದಿನಗಳಲ್ಲಿ ನೇಕಾರಿಕೆಯು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದು, ನೇಕಾರರ ಜೀವನ ಸಂಕಷ್ಟಮಯವಾಗಿದೆ. ನೇಕಾರಿಕೆ ವೃತ್ತಿಗೆ ಸರಕಾರ ಆರ್ಥಿಕ ಭದ್ರತೆ ನೀಡುವ ಅವಶ್ಯಕತೆ ಇದೆ ಎಂದು ಗದಗ-ಬೆಟಗೇರಿ ನೇಕಾರರ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಮಲ್ಲಿಕಾರ್ಜುನ ಬೆಲ್ಲದ ಹೇಳಿದರು.

ಅವರು ಶನಿವಾರ ಸಂಘದ ಕಾರ್ಯಾಲಯದಲ್ಲಿ 2025ನೇ ವರ್ಷದ ದಿನದರ್ಶಿಕೆಯನ್ನು ಬಿಡುಗಡೆಗೊಳಿಸಿ ಮಾತ ನಾಡಿದರು. ನೇಕಾರರ ಬದುಕು ಹಾಗೂ ನೇಯ್ಗೆ ಸಮುದಾಯದ ಸಾಮಾಜಿಕ, ಆರ್ಥಿಕ ಆಯಾಮ ಹಾಗೂ ಸ್ಥಿತಿ-ಗತಿಗಳತ್ತ ನಾವೆಲ್ಲರೂ ಗಮನ ಹರಿಸಿ



ಅವರ ಆರ್ಥಿಕ ಸದೃಢತೆಯತ್ತ ನಮ್ಮೆಲ್ಲರ ಚಿತ್ತವಿರಲಿ ಎಂದರು.

ಸಂಘದ ಉಪಾಧ್ಯಕ್ಷ ವಿಜಯಕುಮಾರ ಕಬಾಡಿ ಮಾತನಾಡಿ, ನೇಕಾರರ ಪತ್ತಿನ ಸಹಕಾರ ಸಂಘ ಹಾಗೂ ಸರ್ಕಾರದಿಂದ ನೇಕಾರರಿಗೆ ಲಭ್ಯವಿರುವ ಸೌಲಭ್ಯವನ್ನು ಪಡೆದುಕೊಂಡು ನೇಕಾರರು ಆರ್ಥಿಕವಾಗಿ ಸುಧಾರಿಸಿಕೊಳ್ಳಲಿ ಎಂದರು.

ಸಂಘದ ನಿರ್ದೇಶಕರಾದ ವ್ಹಿ.ಕೆ. ಗುರುಮಠ, ಚನ್ನವೀರಪ್ಪ ಚನ್ನಪ್ಪನವರ ಮಾತನಾಡಿ, ಭಾರತದಲ್ಲಿ ಕೈಮಗ್ಗ ಮತ್ತು ವಸ್ತ್ರೋದ್ಯಮ ಒಂದು ಪ್ರಾಚೀನ ಸಂಪ್ರದಾಯದ ಪ್ರತಿಬಿಂಬವಾಗಿದೆ. ಈ ಕಲೆ ಹಾಗೂ ನೇಕಾರರು ನಮ್ಮ ಸಂಸ್ಕೃತಿಯನ್ನು ಬಿಂಬಿಸುತ್ತಾರೆ. ನೇಕಾರಿಕೆ ಉಳಿದು ಮುಂದಿನ ಪೀಳಿಗೆಗೆ ಬಳುವಳಿಯಾಗಿ ಮುನ್ನಡೆಯಬೇಕು ಎಂದರು.

ಕಾರ್ಯಕ್ರಮದಲ್ಲಿ ನಿರ್ದೇಶಕರಾದ ಸುಭಾಸ ಗಂಜಿ, ಮೋಹನಸಾ ರಾಯಭಾಗಿ, ವೀರಭದ್ರಪ್ಪ ಗಂಜಿ, ಅನಿಲ ಗಡ್ಡಿ, ಅಮರೇಶ ಚಾಗಿ, ನಾಮದೇವ ಸೂರೆ, ಮೈಲಾರಪ್ಪ ಅರಣಿ, ವಿಷ್ಣು ಪಾಸ್ತೆ, ವೀಣಾ ನೀಲಗುಂದ, ಶೈಲಾ ಹೆಬ್ಬಳ್ಳಿ, ಮುಖ್ಯ ಕಾರ್ಯ ನಿರ್ವಾಹಕರಾದ ಪ್ರಭು ನೀಲಗುಂದ ಹಾಗೂ ಸಿಬ್ಬಂದಿ ವೀರೇಶ ಕುಂಬಾರ ಮುಂತಾದವರಿದ್ದರು.

## ಕೇಂದ್ರ ಗೃಹ ಸಚಿವರ ರಾಜೀನಾಮೆಗೆ ಆಗ್ರಹ



■ ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ

ಸಂವಿಧಾನ ಶಿಲ್ಪಿ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ವಿರುದ್ಧ ಕೇಂದ್ರ ಗೃಹ ಸಚಿವರು ನೀಡಿರುವ ಅಗೌರವದ ಹೇಳಿಕೆ ಖಂಡನೀಯ. ಸಂವಿಧಾನ ಮತ್ತು ಸಾಮಾಜಿಕ ನ್ಯಾಯವನ್ನು ಎತ್ತಿಹಿಡಿಯುವ ಕೆಲಸ ತುರ್ತಾಗಿ ಆಗಬೇಕಿದೆ ಎಂದು ಸಿಪಿಐಎಂ ಪಕ್ಷದ ಕಾರ್ಯದರ್ಶಿ ದಾವಲಸಾಬ ತಾಳಿಕೋಟಿ ಹೇಳಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಅಂಬೇಡ್ಕರ್ ಅವರ ಬಗ್ಗೆ ರಾಜ್ಯಸಭೆ ಅಧಿವೇಶನದಲ್ಲಿ ಅಮಿತ್ ಶಾ ಅವಹೇಳನಾಕಾರಿಯಾಗಿ ಹೇಳಿಕೆ ನೀಡಿದ್ದು, ಇದು ಅವರ ಮನುವಾದಿ ದೃಷ್ಟಿಕೋನವನ್ನು ಬಿಂಬಿಸಿದೆ. ಅಮಿತ್ ಶಾ ರಾಜಕಾರಣಿಯಲ್ಲ, ಅವರು ವ್ಯಾಪಾರಿ. ಸಮ ರಾಜಕಾರಣವೂ ಸಹ ಅವರಿಗೆ ಒಂದು ಉದ್ಯಮವಾಗಿದೆ. ಇಂತಹ ವ್ಯಕ್ತಿಯಿಂದ ದೇಶ, ಸಂವಿಧಾನದ ರಕ್ಷಣೆ ಅಸಾಧ್ಯ.

ಕೇಂದ್ರ ಗೃಹ ಸಚಿವರು ಕೂಡಲೇ ದೇಶದ ಜನತೆಯಲ್ಲಿ ಕ್ಷಮೆ ಯಾಚಿಸಿ, ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಅವರು ಆಗ್ರಹಿಸಿದ್ದಾರೆ.

## ಸಾಲ ಸೌಲಭ್ಯದ ಸದುಪಯೋಗ ಪಡೆಯಿರಿ

■ ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಗ್ರಾಮೀಣ ಭಾಗದ ರೈತರನ್ನು ಆರ್ಥಿಕವಾಗಿ ಸಧೃಡರನ್ನಾಗಿಸುವ ಉದ್ದೇಶದಿಂದ ಪ್ರಾರಂಭಗೊಂಡ ಕೃಷಿ ಪತ್ತಿನ ಸಹಕಾರಿ ಸಂಘಗಳಲ್ಲಿನ ಸಾಲ ಸೌಲಭ್ಯವನ್ನು ರೈತರು ಸದುಪಯೋಗಪಡಿಸಿಕೊಂಡು ಆರ್ಥಿಕವಾಗಿ ಸಬಲರಾಗಬೇಕು ಎಂದು ಕೋಟುಮಚಗಿ ಕೃಷಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ಪ್ರಕಾಶ ಕುಲಕರ್ಣಿ ಹೇಳಿದರು.

ಸಮೀಪದ ಕೋಟುಮಚಗಿ ಗ್ರಾಮದ ಕೃಷಿ ಪತ್ತಿನ ಸಹಕಾರಿ ಸಂಘ-2ರಲ್ಲಿ ಶುಕ್ರವಾರ ಸಂಘದ ಸದಸ್ಯರಿಗೆ ಟ್ರ್ಯಾಕ್ಟರ್ ಸಾಲ ಮಂಜೂರಾತಿ ಪತ್ರ ನೀಡಿ ಅವರು ಮಾತನಾಡಿದರು.

ನಾನಾ ಯೋಜನೆಯಡಿ ಫಲಾನುಭವಿಗಳನ್ನು ಆಯ್ಕೆ ಮಾಡಿ



ಟ್ರ್ಯಾಕ್ಟರ್ ಸಾಲ, ಗೃಹಬಳಕೆ ಸಾಲ, ವ್ಯಾಪಾರಕ್ಕಾಗಿ ಸಾಲ, ಹೈನುಗಾರಿಕೆ ಅಲ್ಲದೆ ಇನ್ನಿತರ ವ್ಯಾಪರಸ್ಥರಿಗೆ ಅಗತ್ಯಕ್ಕನುಗುಣವಾಗಿ ಸಾಲವನ್ನು ಪ್ರಾಥಮಿಕ ಕೃಷಿ ಸಾಲ ಸಂಘಗಳ ಮೂಲಕ ನೀಡಲಾಗುತ್ತಿದೆ. ಇದು ಸಾಲ ಮತ್ತು ಆರ್ಥಿಕ ಸೇವೆಗಳ ಹೊರತಾಗಿ ರೈತರಿಗೆ ಮತ್ತು ಗ್ರಾಮೀಣ ಕೃಷಿ ಸಮುದಾಯಗಳಿಗೆ ಬಹು ಸೇವೆಗಳನ್ನು ಒದಗಿಸುತ್ತಿದೆ. ಪ್ರಾಥಮಿಕ ಕೃಷಿ ಸಾಲ ಸಂಘಗಳನ್ನು ಬಲಪಡಿಸುವ ಮೂಲಕ ಕೃಷಿ ಸ್ಥಿತಿಯನ್ನು ಸುಧಾರಿಸಲು, ಗ್ರಾಮೀಣ ಸಮುದಾಯಗಳನ್ನು ಉನ್ನತೀಕರಿಸಲು ಮತ್ತು ಅಂತರ್ಗತ ಆರ್ಥಿಕ ಬೆಳವಣಿಗೆಯನ್ನು ಉತ್ತೇಜಿಸುವ ಗುರಿಯನ್ನು ಹೊಂದಲಾಗಿದೆ. ಈ ಪ್ರಯತ್ನಗಳು ಬಡತನ ಕಡಿತ, ಆಹಾರ ಭದ್ರತೆ ಮತ್ತು ಕೃಷಿ ಆರ್ಥಿಕತೆಗಳಲ್ಲಿ ಸುಸ್ಥಿರ ಅಭಿವೃದ್ಧಿಗೆ ಕೊಡುಗೆ ನೀಡಬಹುದಾಗಿದೆ ಎಂದರು.

ಸಂಘದ ನಿರ್ದೇಶಕರಾದ ಪ್ರಕಾಶ ಮುಧೋಳ, ಈರಣ್ಣ ನೇಗಲಿ, ಬಸವರಾಜ ನವಲಗುಂದ, ಮಾರುತಿ ಪೂಜಾರ, ಮಲ್ಲಪ್ಪ ಇಬ್ರಾಹಿಂಪೂರ, ಚನ್ನಬಸನಗೌಡ ಸಂಕನಗೌಡ್ರ, ವೆಂಕಟೇಶ ಗೌಡರ ಇದ್ದರು. ವ್ಯವಸ್ಥಾಪಕ ಲೋಕೇಶ ಸಂಕನಗೌಡ್ರ ನಿರ್ವಹಿಸಿದರು.

## ರಾಜ್ಯದಲ್ಲಿ ತುರ್ತು ಪರಿಸ್ಥಿತಿಯ ವಾತಾವರಣ

■ ವಿಜಯಸಾಕ್ಷಿ ಸುದ್ದಿ, ಗದಗ

ಚಳಿಗಾಲದ ಅಧಿವೇಶನದಲ್ಲಿ ನಡೆಯಬೇಕಾದ ಉತ್ತರ ಕರ್ನಾಟಕದ ಅಭಿವೃದ್ಧಿಯ ಬಗ್ಗೆ ಇದ್ದ ವಿಷಯವನ್ನು ಹಾಗೂ ರಾಜ್ಯ ಸರ್ಕಾರದ ವೈಫಲ್ಯಗಳನ್ನು ಮರೆಮಾಚಲು ಸರ್ಕಾರದ ಸಚಿವರುಗಳೇ ಕುಮ್ಮಕ್ಕು ನೀಡಿ ಜನರ ಅಭಿವೃದ್ಧಿ ವಿಚಾರಗಳನ್ನು ದಿಕ್ಕು ತಪ್ಪಿಸುವ ಕಾರ್ಯದಲ್ಲಿ ಮಗ್ನರಾಗಿರುವುದಕ್ಕೆ ನಿನ್ನೆ ಸುವರ್ಣಸೌಧದಲ್ಲಿ ನಡೆದ ಘಟನೆಯೇ ಸಾಕ್ಷಿ ಎಂದು ಗದಗ ಜಿಲ್ಲಾ ಬಿಜೆಪಿ ಅಭಿಪ್ರಾಯಪಟ್ಟಿದೆ.

ಈ ಬಗ್ಗೆ ನೀಡಿರುವ ಪತ್ರಿಕಾ ಹೇಳಿಕೆಯಲ್ಲಿ, ಇಲ್ಲ ಸಲ್ಲದ ಪದ ಬಳಕೆ ಮಾಡಿ ವಿರೋಧ ಪಕ್ಷದ ನಾಯಕರ ತೇಜೋವಧೆ ಮಾಡುತ್ತ ತಮ್ಮ ಬೆಂಬಲಿಗರ



ಮೂಲಕ ಸುವರ್ಣಸೌಧದಲ್ಲಿಯೇ ಹಲ್ಲೆ ಮಾಡುವ ಮಟ್ಟಿಗೆ ರಾಜ-ಕಾರಣ ಮಾಡುವ ಸರ್ಕಾರ ಇದಾಗಿದ್ದು, ಜನಸಾಮಾನ್ಯರಿಗೆ ಭಯ ಹುಟ್ಟುವ ವಾತಾವರಣ ನಿರ್ಮಾಣವಾಗಿದೆ. ಒಂದು ರೀತಿ ರಾಜ್ಯದಲ್ಲಿ ತುರ್ತು ಪರಿಸ್ಥಿತಿಯ ವಾತಾವರಣ ನಿರ್ಮಾಣವಾಗಿದ್ದು, ಕಾನೂನು ಸುವ್ಯವಸ್ಥೆ ಸಂಪೂರ್ಣವಾಗಿ ನಾಶವಾಗಿದೆ.

ಈ ಘಟನೆಯನ್ನು ಸಮಗ್ರವಾಗಿ ತನಿಖೆ ಮಾಡಬೇಕು ಮತ್ತು ಕೂಡಲೇ ಸಂಬಂಧಪಟ್ಟ ಸಚಿವರು ಸಿ.ಟಿ. ರವಿಯವರ, ವಿರೋಧ ಪಕ್ಷಗಳ ಕ್ಷಮೆ ಕೋರಬೇಕು. ಇಲ್ಲದಿದ್ದಲ್ಲಿ ಭಾರತೀಯ ಜನತಾ ಪಾರ್ಟಿಯ ಕಾರ್ಯಕರ್ತರು ಇಂತಹ ರಾಜ್ಯ ಸರ್ಕಾರದ ದುರಾಡಳಿತದ ವಿರುದ್ಧ ಉಗ್ರ ಹೋರಾಟ ಮಾಡುವದು ಅನಿವಾರ್ಯ ಎಂದು ಗದಗ ಜಿಲ್ಲಾ ಬಿಜೆಪಿ ಅಧ್ಯಕ್ಷ ತೋಟಪ್ಪ(ರಾಜು) ಕುರುಡಗಿ, ವಕ್ತಾರರಾದ ಎಂ.ಎಂ. ಹಿರೇಮಠ, ಸಹ-ವಕ್ತಾರ ದತ್ತಣ್ಣ ಜೋಶಿ, ಪ್ರಕೋಷ್ಠಗಳ ಸಂಯೋಜಕ ಶಶಿಧರ ದಿಂಡೂರ, ಸಹ-ಸಂಯೋಜಕ ರಮೇಶ ಸಜ್ಜಗಾರ, ಪ್ರಮುಖರಾದ ಅಶೋಕ ಸಂಕಣ್ಣವರ, ನಾಗರಾಜ ಕುಲಕರ್ಣಿ, ಸಂತೋಷ ಅಕ್ಕಿ, ಉಮೇಶ ಚನ್ನುಪಾಟೀಲ, ಪ್ರಕಾಶ ಕೊತಂಗಬರಿ ಮುಂತಾದವರು ಹೇಳಿಕೆ ನೀಡಿದ್ದಾರೆ.

### ದಾಸೋಹ ರೂಪದಲ್ಲಿ ತಾಯಿ ಪ್ರೀತಿಯನ್ನು ನಾಡಿಗೆ ಹಂಚುತ್ತಿರುವ ಬಸವರಾಜ ಹೊರಟ್ಟಿ

# ಅವ್ವನ ನೆನಪಿನ ಶಿವಾನುಭವ ಡಿ.23ಕ್ಕೆ

■ ವಿಜಯಸಾಕ್ಷಿ ಸುದ್ದಿ, ಗದಗ

ವಿಧಾನಪರಿಷತ್ತಿನ ಸಭಾಪತಿಗಳಾದ ಬಸವರಾಜ ಹೊರಟ್ಟಿಯವರು ತಮ್ಮ ತಾಯಿ ಗುರವ್ವ ಶಿವಲಿಂಗಪ್ಪ ಹೊರಟ್ಟಿ ಸ್ಮರಣಾರ್ಥ ಅವ್ವ ಸೇವಾ ಟ್ರಸ್ಟನ್ನು ಸ್ಥಾಪಿಸಿ ಕಳೆದ 14 ವರ್ಷಗಳಿಂದ ದಾಸೋಹ ರೂಪದಲ್ಲಿ ತಾಯಿ ಪ್ರೀತಿಯನ್ನು ನಾಡಿಗೆ ಹಂಚುತ್ತಿದ್ದಾರೆ.

ಕೋಟ್ಯಾಂತರ ಬೆಲೆಬಾಳುವ ತಮ್ಮ 7 ಎಕರೆ ಜಮೀನನ್ನು ಸರ್ಕಾರಿ ಶಾಲೆಗೆ ನೀಡಿ 35 ಕೋಟಿಗೂ ಹೆಚ್ಚು ವೆಚ್ಚದಲ್ಲಿ ಸ್ವಗ್ರಾಮ ಯಡಹಳ್ಳಿಯಲ್ಲಿ ದೇಶದಲ್ಲಿಯೇ ಮೊದಲ ಹೈಟೆಕ್ ಶಾಲೆಯನ್ನು ನಿರ್ಮಿಸಿ ಅಕ್ಷರ ದಾಸೋಹದಲ್ಲಿ ತೊಡಗಿದೆ. ನಾಡಿನ 100ಕ್ಕೂ ಅಧಿಕ ದಿವ್ಯಾಂಗರಿಗೆ ಟ್ರೈಸಿಕಲ್ ನೀಡಿ ಆಸರೆ ಕಲ್ಪಿಸಿದೆ. ಪ್ರತಿವರ್ಷ ಸಾಧಕರಿಗೆ ಅವ್ವ ಪ್ರಶಸ್ತಿ ನೀಡಿ ಗೌರವಿಸಿದೆ. ಧಾರವಾಡ ಜಿಲ್ಲೆಯಲ್ಲಿ 1000ಕ್ಕೂ ಅಧಿಕ ಸಸಿಗಳನ್ನು ವಿತರಿಸಿ ಪರಿಸರ ಸಂರಕ್ಷಣೆಗೆ ಅಳಿಲು ಸೇವೆ ಸಲ್ಲಿಸಿದೆ. ಬೆಳಗಾವಿ ವಿಭಾಗದ



48 ಜನ ಪ್ರತಿಭಾವಂತ ಅಂಧ ವಿಕಲಚೇತನ ವಿಧ್ಯಾರ್ಥಿಗಳಿಗೆ ಧನ ಸಹಾಯ ಮಾಡಿದೆ. 80 ಜನ ಹಿರಿಯ ತಾಯಂದಿರಿಗೆ ಗೌರವ ಸನ್ಮಾನ ಮಾಡಿದೆ. ಅನಾರೋಗ್ಯ ಪೀಡಿತ ಕುಟುಂಬದ ಮಕ್ಕಳಿಗೆ ಆಸರೆಯಾಗಿದೆ. ಶಾಲಾ ಕಾಲೇಜು ಹಂತದಲ್ಲಿ ವಿದ್ಯಾರ್ಥಿಗಳಿಗೆ ತಾಯಿಯ ಮಹತ್ವದ ಕುರಿತು ಬೆಳಗಾವಿ ವಿಭಾಗ ಮಟ್ಟದಲ್ಲಿ ನಿಬಂಧ ಸ್ಪರ್ಧೆ ಏರ್ಪಡಿಸಿ ಭಾಗವಹಿಸಿದ 26 ಸಾವಿರಕ್ಕೂ ಹೆಚ್ಚು ಮಕ್ಕಳಲ್ಲಿ ಆಯ್ದ ಲೇಖನಗಳನ್ನು ಒಳಗೊಂಡ 'ಮಕ್ಕಳ ಮನದಾಳದಲ್ಲಿ ಅವ್ವ' ಎಂಬ ಅಮೂಲ್ಯ ಗ್ರಂಥವನ್ನು ಲೋಕಾರ್ಪಣೆ ಮಾಡಲಾಗಿದೆ.

ಇಂತಹ ಹತ್ತು ಹಲವಾರು ಕಾರ್ಯಕ್ರಮಗಳ ಮೂಲಕ ನೊಂದವರಿಗೆ, ಪ್ರತಿಭಾವಂತರಿಗೆ, ಸಾಧಕರಿಗೆ ಅವ್ವ ಸೇವಾ ಟ್ರಸ್ಟ್ ನೆರವಿನ ಹಸ್ತ ಚಾಚಿದೆ. ಯಡೆಯೂರು ಜಗದ್ಗುರು ತೋಂಟದಾರ್ಯಮಠ ಗದಗ ಇಲ್ಲಿಯ ಲಿಂಗಾಯತ ಪ್ರಗತಿಶೀಲ ಸಂಘದಲ್ಲಿ 1.00 ಲಕ್ಷ ರೂಪಾಯಿಗಳ ದತ್ತಿನಿಧಿ ಸ್ಥಾಪಿಸಿ ಪ್ರತಿವರ್ಷ ಅವ್ವನ ಹೆಸರಿನಲ್ಲಿ ಜನಪರ ಕಾರ್ಯಕ್ರಮವನ್ನು ಸಂಘಟಿಸಲು ಅನುಕೂಲ ಕಲ್ಪಿಸಿದ್ದಾರೆ. ಡಿ.23ರಂದು ನಡೆಯುವ ವಿಶೇಷ ಉಪನ್ಯಾಸ ಸನ್ಮಾನ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ಶ್ರೀ. ಮ.ನಿ.ಪ್ರ.ಜಗದ್ಗುರು ಡಾ.ತೋಂಟದ ಸಿದ್ಧರಾಮ ಮಹಾಸ್ವಾಮಿಗಳು ಎಡೆಯೂರು ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಡಂಬಳ-ಗದಗ ಇವರು ವಹಿಸುವರು.

ಮುಖ್ಯ ಅತಿಥಿಗಳಾಗಿ ಅವ್ವ ಸೇವಾ ಟ್ರಸ್ಟ್‌ನ ಸಂಸ್ಥಾಪಕ ಅಧ್ಯಕ್ಷರಾದ ಶರಣ ಸಭಾಪತಿ ಬಸವರಾಜ ಹೊರಟ್ಟಿ, ಕಾರ್ಯದರ್ಶಿ ಶರಣ ಶಶಿ ಸಾಲಿ, ಟ್ರಸ್ಟ್‌ನ ಗದಗ ಜಿಲ್ಲಾ ಸಂಚಾಲಕ ಶರಣ ಡಾ.ಬಸವರಾಜ ಧಾರವಾಡ ಭಾಗವಹಿಸಲಿದ್ದಾರೆ. ಅವ್ವನ ಕುರಿತು ಡಿ.ಸಿ. ಪಾವಟೆ ಬಿ.ಇಡಿ ಕಾಲೇಜಿನ ಡಾ. ಗಿರಿಜಾ ಎಸ್.ಹಸಬಿ ಉಪನ್ಯಾಸ ನೀಡಲಿದ್ದಾರೆ.

ಕಾರ್ಯಕ್ರಮದ ದಾಸೋಹ ಸೇವೆಯನ್ನು ಶರಣೆ ಮಾತೋಶ್ರೀ ಗುರವ್ವ ಶಿವಲಿಂಗಪ್ಪ ಹೊರಟ್ಟಿ ಸ್ಮರಣಾರ್ಥ ಅವ್ವ ಸೇವಾ ಟ್ರಸ್ಟ್ ಹುಬ್ಬಳ್ಳಿ ವಹಿಸಲಿದ್ದು, ಈ ಅರ್ಥಪೂರ್ಣ ಕಾರ್ಯಕ್ರಮದಲ್ಲಿ ಭಾಗಿಯಾಗುವ ಮೂಲಕ ಅವ್ವನ ಮಮತೆ ಪ್ರೀತಿಯ ಬೀಜವನ್ನು ಮತ್ತೆ ಹೆಚ್ಚೆಚ್ಚು ಬಿತ್ತಬೇಕಿದೆ ಎಂದು ಲಿಂಗಾಯತ ಪ್ರಗತಿಶೀಲ ಸಂಘ ಹಾಗೂ ಅವ್ವ ಸೇವಾ ಟ್ರಸ್ಟ್‌ನ ಪದಾಧಿಕಾರಿಗಳು ವಿನಂತಿಸಿದ್ದಾರೆ.

ಶ್ರೀ ತೋಂಟದಾರ್ಯ ಮಠದಲ್ಲಿ ಅವ್ವ ಸೇವಾ ಟ್ರಸ್ಟ್ ಸ್ಥಾಪಿಸಿದ ದತ್ತಿನಿಧಿ ವತಿಯಿಂದ ಅವ್ವನ ಮಹತ್ವ ಕುರಿತು ಡಿ.23ರ ಸಾಯಂಕಾಲ 7 ಗಂಟೆಗೆ ವಿಶೇಷ ಉಪನ್ಯಾಸ, ವಿವಿಧ ವಿಧಾಯಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಅವ್ವ ಸೇವಾ ಸಂಸ್ಥೆಯನ್ನು 2011ರಲ್ಲಿ ಲಿಂಗೈಕ್ಯ ಡಾ.ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳಿಂದ ಪ್ರಾರಂಭಿಸಿದ ಹೊರಟ್ಟಿಯವರು ಅವ್ವನ ಹೆಸರಿನಲ್ಲಿ ಸಮಾಜ ಸೇವೆಗೆ ಸಮರ್ಪಿಸಿಕೊಂಡ ಈ ಟ್ರಸ್ಟ್ ಅನೇಕರ ಬಾಳಿಗೆ ಬೆಳಕಾಗಿದೆ.

# ಸಿ.ಟಿ.ರವಿ ಸದಸ್ಯತ್ವ ರದ್ದುಗೊಳಿಸಲು ಆಗ್ರಹ

■ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ವಿಧಾನ ಸೌಧದ ಅಧಿವೇಶನದಲ್ಲಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರನ್ನು ಆಕ್ಷೇಪಾರ್ಹ ಪದಗಳಿಂದ ನಿಂದಿಸಿದ ಸಿ.ಟಿ. ರವಿಯವರ ವಿಧಾನ ಪರಿಷತ್ ಸದಸ್ಯತ್ವವನ್ನು ತಕ್ಷಣವೇ ರದ್ದುಪಡಿಸಬೇಕು, ಮಹಿಳೆಯರ ಜೊತೆ ಅಗೌರವದಿಂದ ವರ್ತಿಸಿದ ಅನರ್ಹರಿಗೆ ವಿಧಾನ ಸೌಧ ಪ್ರವೇಶಿಸಲು ಅವಕಾಶ ನೀಡಬಾರದು, ಮಹಿಳೆಯನ್ನು ದೇವಿ ದೇವತೆ ಎಂದು ಪೂಜಿಸುವ ನಾಡಿನಲ್ಲಿ ಮಹಿಳೆಯರ ಬಗ್ಗೆ ಕನಿಷ್ಠ ಗೌರವವೂ ಇಲ್ಲದಂತೆ ನಾಲಗೆ ಹರಿಯಬಿಟ್ಟ ಸಿಟಿ ರವಿ ವಿರುದ್ಧ ಸಭಾಧ್ಯಕ್ಷರು ಸೂಕ್ತ ಕ್ರಮ ಜರಗಿಸಬೇಕೆಂದು ವೆಲ್ಫೇರ್ ಪಾರ್ಟಿ ಆಫ್ ಇಂಡಿಯಾ ಇದರ ಕರ್ನಾಟಕ ರಾಜ್ಯ ಮಹಿಳಾ ವಿಭಾಗದ ಅಧ್ಯಕ್ಷೆ ಸಬೀಹಾ ಪಟೇಲ್ ಆಗ್ರಹಿಸಿದ್ದಾರೆ.

ಈ ಬಗ್ಗೆ ಪತ್ರಿಕಾ ಹೇಳಿಕೆ ನೀಡಿರುವ ಅವರು, ಇಂತಹ ಹೇಯ ನಡವಳಿಕೆಯನ್ನು ಖಂಡಿಸುವ ಬದಲು ಕೆಲವರು ಸಮರ್ಥನೆಗಿಳಿದಿರುವುದು ಆತಂಕಕಾರಿ ವಿಚಾರವಾಗಿದೆ. ಇದು ಮಹಿಳೆಯರ ಉತ್ಸಾಹವನ್ನು ಕುಗ್ಗಿಸಿ ಅವರು ರಾಜಕೀಯದಲ್ಲಿ ಮುಂದುವರಿಯದಂತೆ ತಡೆಯುವ ಹುನ್ನಾರವಾಗಿದೆ. ಮಹಿಳೆಯರ ಹಕ್ಕುಗಳ ಬಗ್ಗೆ, ಮಹಿಳೆಯರ ಸ್ವಾತಂತ್ರ್ಯದ ಬಗ್ಗೆ ಮಾತನಾಡುವ ಬಿಜೆಪಿಗರು ಈ ಬಗ್ಗೆ ಯಾಕೆ ಮೌನ ತಾಳಿದ್ದಾರೆ ಎಂದು ಅವರು ಪ್ರಶ್ನಿಸಿದ್ದಾರೆ.

ಅ.ಭಾ ವೀರಶೈವ ಮಹಾಸಭಾ ಗದಗ ಜಿಲ್ಲಾ ಘಟಕದ ಸಭೆ

# ತಾಲೂಕಾ ಯುವ ಘಟಕಗಳ ರಚನೆಗೆ ಕ್ರಮ

■ವಿಜಯಸಾಕ್ಷಿ ಸುದ್ದಿ, ಗದಗ

ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾ ಗದಗ ಜಿಲ್ಲಾ ಘಟಕವು ಹಲವಾರು ರಚನಾತ್ಮಕ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಂಡು ಕಾರ್ಯ ನಿರ್ವಹಿಸುತ್ತಿದ್ದು, ಬರಲಿರುವ ದಿನಮಾನಗಳಲ್ಲಿ ಇನ್ನಷ್ಟು ಸಾಮಾಜಿಕ ಉಪಯುಕ್ತ ಕೆಲಸ ಕಾರ್ಯಗಳನ್ನು ಹಮ್ಮಿಕೊಳ್ಳಲಾಗುವದು ಎಂದು ಮಹಾಸಭಾದ ಗದಗ ಜಿಲ್ಲಾ ಘಟಕದ ಅಧ್ಯಕ್ಷ ಶರಣಬಸಪ್ಪ ಗುಡಿಮನಿ ಹೇಳಿದರು.

ಅವರು ಶುಕ್ರವಾರ ಗದಗ ಜಿಲ್ಲಾ ಮಹಾಸಭಾ ಘಟಕದ ಕಾರ್ಯಕಾರಿ ಮಂಡಳಿಯ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

ರಾಜ್ಯ ಘಟಕದ ಸೂಚನೆಯಂತೆ ಕಾರ್ಯಗಳು ಜಿಲ್ಲೆಯಾದ್ಯಂತ ನಡೆದಿದ್ದು, ಇದೀಗ ಗದಗ ಜಿಲ್ಲೆಯ ಎಲ್ಲ ತಾಲೂಕಗಳ ಯುವ ಘಟಕಗಳನ್ನು ರಚಿಸುವದು, ಸದಸ್ಯರನ್ನಾಗಿಸುವದು ಅದಕ್ಕಾಗಿ ಉಸ್ತುವಾರಿಗಳನ್ನು ನೇಮಿಸಿದ ಬಗ್ಗೆ ಸಭೆಯಲ್ಲಿ ವಿವರಣೆ ನೀಡಿದರು.




ರೋಣ ಹಾಗೂ ಗಜೇಂದ್ರಗಡ-ಭೀಮರಡ್ಡೇಪ್ಪ ರಡ್ಡೇರ, ನರಗುಂದ-ಮಲ್ಲಾಪೂರ ಹಾಗೂ ಸಿದ್ಧಲಿಂಗಪ್ಪ ಪಟ್ಟಣಶೆಟ್ಟಿ, ಮುಂಡರಗಿ-ಶಿವಪ್ಪ ಅಂಕದ ಹಾಗೂ ವಿರುಪಾಕ್ಷಪ್ಪ ಲಕ್ಕುಂಡಿ, ಶಿರಹಟ್ಟಿ-ವೀರನಗೌಡ ಪಾಟೀಲ ಹಾಗೂ ಬಾಪೂಜಿ ಪಾಟೀಲ, ಗದಗ-ಶಿವರಾಜ ಹಿರೇಮನಿಪಾಟೀಲ ಹಾಗೂ ವಿಜಯಾನಂದ ಮುತ್ತಿನಪೆಂಡಿಮಠ ಈ ಪ್ರಕಾರ ಉಸ್ತುವಾರಿಗಳನ್ನು ನೇಮಕ ಮಾಡಲಾಗಿದ್ದು, ಇವರುಗಳು ತಾಲೂಕಾ ಯುವ ಘಟಕಗಳ ರಚನಾ ಕಾರ್ಯ ನಿರ್ವಹಿಸುವರು ಎಂದರು.

ಜಿಲ್ಲಾ ಘಟಕದ ಕಟ್ಟಡ ಸಮಿತಿಯ ಅಧ್ಯಕ್ಷರಾಗಿ ಸದಾಶಿವಯ್ಯ ಮದರಿಮಠ ಅವರನ್ನು ಈಗಾಗಲೇ ಆಯ್ಕೆ ಮಾಡಿದಂತೆ ಅವರು ಕಾರ್ಯಪ್ರವೃತ್ತರಾಗಿದ್ದಾರೆ. ಕಟ್ಟಡ ನಿರ್ಮಾಣಕ್ಕೆ ದಾನಿಗಳ ಸಹಾಯ ಸಹಕಾರ ಅವಶ್ಯವಿದ್ದು, ಸಮಾಜಬಾಂಧವರು ಕೈಜೋಡಿಸಬೇಕೆಂದರು. ಇದೇ ಸಂದರ್ಭದಲ್ಲಿ ಕಟ್ಟಡ ಕಾಮಗಾರಿಯ ಹಂತವನ್ನು ವೀಕ್ಷಿಸಲಾಯಿತು.

ಪ್ರಾರಂಭದಲ್ಲಿ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ಮುರುಘರಾಜೇಂದ್ರ ಬಡ್ನಿ ಸ್ವಾಗತಿಸಿ ನಿರೂಪಿಸಿದರು. ಕೋಶಾಧ್ಯಕ್ಷ ಚನ್ನವೀರ ಹುಣಶೀಕಟ್ಟಿ ವಂದಿಸಿದರು.

ಸಭೆಯಲ್ಲಿ ಜಿಲ್ಲಾ ಘಟಕದ ಉಪಾಧ್ಯಕ್ಷರುಗಳಾದ ಬಸವರಾಜ ಅಂಗಡಿ, ಭೀಮರಡ್ಡೇಪ್ಪ ರಡ್ಡೇರ, ವಿಜಯಲಕ್ಷ್ಮೀ ಮಾನ್ವಿ, ಚನ್ನಯ್ಯ ಸಂಗಳಮಠ, ಕಾರ್ಯದರ್ಶಿಗಳಾದ ಕಾಶಪ್ಪ ಗದಗಿನ, ಸಿದ್ಧಲಿಂಗಪ್ಪ ಪಟ್ಟಣಶೆಟ್ಟಿ, ಸುವರ್ಣ ಶೆಲ್ಲಿಕೇರಿ, ನಿರ್ಮಲಾ ಚಿಕ್ಕನಗೌಡ್ರ ಮುಂತಾದವರಿದ್ದರು.

ತಾಲೂಕಾ ಯುವ ಘಟಕಕ್ಕೆ ಸದಸ್ಯರಾಗಲು 250 ರೂ. ಸದಸ್ಯತ್ವ ನೋಂದಣಿ ಶುಲ್ಕವಿದ್ದು, 20-30 ವರ್ಷದೊಳಗಿನ ಯುವಕರು ಸದಸ್ಯತ್ವ ಪಡೆಯಬಹುದು. 31 ಪದಾಧಿಕಾರಿಗಳನ್ನು ಒಳಗೊಂಡ ಸಮಿತಿ ರಚಿಸಿ ನಂತರ ತಾಲೂಕು ಘಟಕವನ್ನು ಮಾಡಲಾಗುವದು. ಹಾಗೆಯೇ ಮಹಿಳಾ ಯುವ ಘಟಕವನ್ನು ಇದೇ ಕ್ರಮದಲ್ಲಿ ರಚಿಸಲಾಗುವದು ಎಂದು ಶರಣಬಸಪ್ಪ ಗುಡಿಮನಿ ತಿಳಿಸಿದರು.

# ಗ್ರಾ.ಪಂ ನೂತನ ಅಧ್ಯಕ್ಷರಿಗೆ ಸನ್ಮಾನ



■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ತಾಲೂಕಿನ ಹರ್ತಿ ಗ್ರಾಮ ಪಂಚಾಯಿತಿಯ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಬಿಜೆಪಿ ಬೆಂಬಲಿತ ಅಭ್ಯರ್ಥಿ ಹಾಲಮ್ಮ ಕುರಿ ಅವರನ್ನು ಗದಗ ಜಿಲ್ಲಾ ಬಿಜೆಪಿ ಅಧ್ಯಕ್ಷ ತೋಟಪ್ಪ (ರಾಜು) ಕುರಡಗಿ ಅವರ ಸಮ್ಮುಖದಲ್ಲಿ ಕಣವಿ ಗ್ರಾಮದ ಬೀರದೇವರ ದೇವಸ್ಥಾನದ ಬಳಿ ಸನ್ಮಾನಿಸಿ, ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಬಿಜೆಪಿ ಮುಖಂಡರಾದ ರಮೇಶ ಎನ್.ಸಜ್ಜಗಾರ, ಬಸವಣ್ಣೆಪ್ಪ ಚಿಂಚಲಿ, ಬೂದಪ್ಪ ಹಳ್ಳಿ, ಗ್ರಾ.ಪಂ ಉಪಾಧ್ಯಕ್ಷರಾದ ರೇಣವ್ವ ತಳವಾರ, ಸದಸ್ಯರಾದ ಸೋಮಣ್ಣ ನಡುರ, ಪ್ರಕಾಶ ಕುರ್ತಕೋಟಿ, ಪಾರ್ವತವ್ವ ಕುರ್ತಕೋಟಿ, ಗಂಗಾಧರ ಗಡಾದ, ಯಲ್ಲಪ್ಪ ತಿಪ್ಪಣ್ಣವರ, ಪರಪ್ಪ ಮಾಯಣ್ಣವರ, ಬೀರಪ್ಪ ಉಪ್ಪಾರ, ರಾಮಣ್ಣ ತೋಳನವರ, ಗ್ರಾಮೀಣ ಮುಖಂಡ ರವಿ ವಗ್ಗನವರ, ಮುತ್ತಪ್ಪ ಮೂಲಿಮನಿ, ಸಿದ್ದಪ್ಪ ಜೊಂಡಿ, ಸುನೀಲ ಕುರ್ತಕೋಟಿ, ಸೋಮಣ್ಣ ಕೋರಿ, ಮಂಜು ಕುರಿ, ಕೃಷ್ಣ ನಾಗಲೂಟಿಮಠ, ಯಲ್ಲಪ್ಪ ಕೋರಿ ಮುಂತಾದವರು ಉಪಸ್ಥಿತರಿದ್ದು ಶುಭ ಕೋರಿದರು.



ಹುಬ್ಬಳ್ಳಿಯ ಕಾರಾಗೃಹಕ್ಕೆ ತಾಲೂಕು ಕಾನೂನು ಸೇವಾ ಸಮಿತಿಯ ಸದಸ್ಯ ಕಾರ್ಯದರ್ಶಿ ಹಾಗೂ ಪ್ರಧಾನ ಸಿವಿಲ್ ನ್ಯಾಯಾಧೀಶರಾದ ನಾಗೇಶ್ ನಾಯ್ಕ್ ಅವರು ಶನಿವಾರ ಭೇಟಿ ನೀಡಿದರು. ಕಾರಾಗೃಹದಲ್ಲಿನ ಕೈದಿಗಳಿಗೆ ನೀಡುವ ಸೌಲಭ್ಯಗಳು ಹಾಗೂ ಇನ್ನಿತರೆ ಕಾರ್ಯಗಳ ಬಗ್ಗೆ ಪರಿಶೀಲನೆ ನಡೆಸಿದರು. ಈ ಸಂದರ್ಭದಲ್ಲಿ 2ನೇ ನ್ಯಾಯಾಲಯದ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳಾದ ಕರ್ನ್ ಸಿಂಗ್ ಆರ್.ಯು., ಕಾರಾಗೃಹದ ಅಧಿಕಾರಿಗಳು ಹಾಜರಿದ್ದರು.

# ನಮ್ಮ ಹೋರಾಟ ನಿಲ್ಲದು



■ವಿಜಯಸಾಕ್ಷಿ ಸುದ್ದಿ, ಹರಪನಹಳ್ಳಿ

2ಎ ಮೀಸಲಾತಿಗಾಗಿ ನಡೆಯುತ್ತಿದ್ದ ಹೋರಾಟವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹತ್ತಿಕ್ಕುವ ಕುತಂತ್ರ ಮಾಡಿದ್ದರಿಂದ ಇಷ್ಟೊಂದು ರಾದ್ಧಾಂತವಾಗಲು ಕಾರಣವಾಯಿತು ಎಂದು ವೀರಶೈವ ಪಂಚಮಸಾಲಿ ಸೌಹಾರ್ದ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಚಂದ್ರಶೇಖರ್ ಪೂಜಾರ್ ಆರೋಪಿಸಿದರು.

ಪಟ್ಟಣದ ವೀರಶೈವ ಪಂಚಮಸಾಲಿ ಸೌಹಾರ್ದ ಪತ್ತಿನ ಸಹಕಾರ ಸಂಘದಲ್ಲಿ ಶನಿವಾರ 2ಎ ಮೀಸಲಾತಿ ಹೋರಾಟದ ವೇಳೆ ನಡೆದ ಗಲಭೆಯನ್ನು ಖಂಡಿಸಿ ನಡೆದ ಸಭೆಯಲ್ಲಿ ಮಾತನಾಡಿದರು.

ರಾಜ್ಯ ಸರ್ಕಾರದ ಈ ಕ್ರಮದಿಂದ ಹೋರಾಟ ನಿಲ್ಲದು. ಇದಕ್ಕೆ ತಕ್ಕ ಪಾಠವನ್ನು ಸಮಾಜ ಕಲಿಸಲಿದೆ. ಬಸವಮೃತ್ಯುಂಜಯ ಸ್ವಾಮಿಗಳ ನೇತೃತ್ವದಲ್ಲಿ ನಡೆದ ಹೋರಾಟ ಶಾಂತಿಯುತವಾಗಿ ನಡೆದಿತ್ತು, ಆದರೆ ವ್ಯವಸ್ಥಿತವಾಗಿ ಹೋರಾಟವನ್ನು ಮಣಿಸುವ ಯತ್ನ ನಡೆಯಿತಲ್ಲದೆ, ಹಲವರ ಮೇಲೆ ಗಂಭೀರವಾಗಿ ಹಲ್ಲೆ ನಡೆಸಲಾಗಿದೆ. ಪಂಚಮಸಾಲಿ ಸಮಾಜದ ಮಕ್ಕಳ ಶಿಕ್ಷಣ, ಯುವ ಜನರ ಉದ್ಯೋಗ, ಮಹಿಳೆಯರ ಕಲ್ಯಾಣ, ರೈತ ಕಾರ್ಮಿಕರ ಅಭ್ಯುದಯ ಸೇರಿದಂತೆ ಸರ್ವರ ಏಳಿಗೆಗಾಗಿ ನಾವು ಹೋರಾಟ ಮಾಡುತ್ತಿದ್ದೇವೆ ಎಂದರು.

ನಮ್ಮ ಸಮಾಜದಲ್ಲೂ ಆರ್ಥಿಕವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಹಿಂದುಳಿದ ಹಲವಾರು ಕುಟುಂಬಗಳಿದ್ದು, 2ಎ ಮೀಸಲಾತಿಯಿಂದ ಸಮಾಜವು ಹೆಚ್ಚಿನ ಮುನ್ನೆಲೆಗೆ ಬರಲು ಸಹಕಾರಿಯಾಗಲಿದೆ ಎಂದರು.

ಬಸವೇಶ್ವರ ಮಹಾವಿದ್ಯಾಲಯದಲ್ಲಿ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಸ್ವಾಗತ ಸಮಾರಂಭ

# ಸದ್ವಿಚಾರ, ನಾಯಕತ್ವದ ಗುಣ ಬೆಳೆಸಿಕೊಳ್ಳಿ

■ವಿಜಯಸಾಕ್ಷಿ ಸುದ್ದಿ, ಗದಗ

ದೇಶದ ಅಭಿವೃದ್ಧಿಗೆ ಪೂರಕವಾದ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಾಸದಲ್ಲಿ ಶಾಲೆ, ಕಾಲೇಜು ಹಾಗೂ ಶಿಕ್ಷಕರ ಕಾರ್ಯ ಶ್ಲಾಘನೀಯ. ವಿದ್ಯಾರ್ಥಿಗಳು ಇಂದಿನ ಸಮಾಜದ ವಾಸ್ತವವನ್ನು ಅರಿತುಕೊಂಡು ಶಿಕ್ಷಕರಿಂದ ವಿದ್ಯೆಯನ್ನು ಪಡೆಯುವುದರ ಜೊತೆಗೆ ಶರಣರ ಆದರ್ಶಗಳನ್ನು ಪಾಲಿಸುತ್ತಾ ಸಾತ್ವಿಕ ನಡೆ-ನುಡಿಗಳ ಮೌಲಿಕ ವ್ಯಕ್ತಿತ್ವ ಹೊಂದಬೇಕೆಂದು ಸಹಕಾರ ಮತ್ತು ಅರಣ್ಯ ಖಾತೆ ಮಾಜಿ ಸಚಿವ ಎಸ್.ಎಸ್ ಪಾಟೀಲ ಕರೆ ನೀಡಿದರು.

ಸ್ಥಳೀಯ ಜಗದ್ಗುರು ತೋಂಟದಾರ್ಯ ವಿದ್ಯಾಪೀಠದ ಬಸವೇಶ್ವರ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಮಹಾವಿದ್ಯಾಲಯದಲ್ಲಿ ಬಿಎ/ಬಿಕಾಂ/ಬಿಎಸ್ಸಿ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ ಸ್ವಾಗತ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.



ಶಿಕ್ಷಕ ವೃತ್ತಿ ಪವಿತ್ರವಾದುದು. ವಿದ್ಯಾರ್ಥಿಗಳು ಅವರ ಮಾರ್ಗದರ್ಶನದಲ್ಲಿ ಸಕಾರಾತ್ಮಕ ನಿಲುವು, ಸದ್ವಿಚಾರ ಹಾಗೂ ನಾಯಕತ್ವದ ಗುಣ ಬೆಳೆಸಿಕೊಳ್ಳಬೇಕೆಂದು ಕಿವಿ ಮಾತು ಹೇಳಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಜಗದ್ಗುರು ತೋಂಟದಾರ್ಯ ವಿದ್ಯಾಪೀಠದ ಕಾಯದರ್ಶಿಗಳಾದ ಎಸ್. ಎಸ್. ಪಟ್ಟಣಶೆಟ್ಟರ ಮಾತನಾಡಿ, ಜೀವನದಲ್ಲಿ ಕಷ್ಟಗಳನ್ನು ತಡೆದುಕೊಂಡು ನಿರಂತರ ಪರಿಶ್ರಮದಿಂದ ಅಧ್ಯಯನ ಮಾಡಿ ಉತ್ತಮ ಸಾಧಕರಾಗಬೇಕು. ವಿದ್ಯಾರ್ಥಿಗಳು ದುಶ್ಚಟ ಮತ್ತು ಮೂಢನಂಬಿಕೆಗಳಿಂದ ದೂರವಿರಬೇಕು. ವಿದ್ಯಾರ್ಜನೆ ಸಮಯದಲ್ಲಿ ಇಂದು ವಿದ್ಯಾರ್ಥಿಗಳು ಮೊಬೈಲನ್ನು ವಿದ್ಯೆಗೆ ಪೂರಕವಾಗುವಂತೆ ಸಕಾರಾತ್ಮಕವಾಗಿ ಬಳಸಬೇಕೆಂದು ಹೇಳಿದರು.

ವೇದಿಕೆಯ ಮೇಲೆ ಅತಿಥಿಗಳಾಗಿ ಸ್ಥಾನಿಕ ಆಡಳಿತ ಮಂಡಳಿ ಸದಸ್ಯರಾದ ಅಮರೇಶ ಅಂಗಡಿ, ಶೇಖಣ್ಣ ಕಳಸಾಪೂರಶೆಟ್ಟರ, ಈಶಣ್ಣ ಮುನವಳ್ಳಿ ಹಾಗೂ ಸಿದ್ಧಲಿಂಗಯ್ಯ ಹಿರೇಮಠ ಉಪಸ್ಥಿತರಿದ್ದರು.

ಪದ್ಮಾವತಿ ಮುಕ್ಕಣ್ಣವರ ಸಂಗಡಿಗರು ಪ್ರಾರ್ಥಿಸಿದರು. ಪ್ರಾ. ಎಂ.ಎಂ. ಬುರಡಿ ಸ್ವಾಗತಿಸಿ ಪರಿಚಯಿಸಿದರು. ಅತೀ ಹೆಚ್ಚು ಅಂಕಗಳಿಸಿದ ಹಾಗೂ ಪಠ್ಯೇತರ ಚಟುವಟಿಕೆಗಳಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು. ಪ್ರೀತಿ ಹಿರೇಮಠ ಹಾಗೂ ಕುಮಾರ ಪ್ರಶಾಂತ ಕಾಳನಾಯಕರ ಸಾಂಸ್ಕೃತಿಕ ಕಾರ್ಯಕ್ರಮವನ್ನು ನಿರೂಪಿಸಿದರು. ಪ್ರೊ. ಕೆ.ವಿ. ಬಾಗಲಕೋಟಿ ಕಾರ್ಯಕ್ರಮ ನಿರೂಪಿಸಿದರು.ಪ್ರೊ. ಆನಂದ ದೇಸಾಯಿಪಟ್ಟಿ ವಂದಿಸಿದರು.

ಮುಖ್ಯ ಅತಿಥಿಗಳಾಗಿ ಪಾಲ್ಗೊಂಡ ವಿಧಾನ ಪರಿಷತ್ ಸದಸ್ಯರಾದ ಎಸ್.ವ್ಹಿ. ಸಂಕನೂರ ಅವರು ಸನ್ಮಾನ ಸ್ವೀಕರಿಸಿ ಮಾತನಾಡಿ, ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಶ್ಲಾಘಿಸುತ್ತಾ, ವ್ಯಕ್ತಿತ್ವದ ಸರ್ವತೋಮುಖ ಬೆಳವಣಿಗೆಗೆ ಪಠ್ಯೇತರ ಚಟುವಟಿಕೆಗಳು ವಿದ್ಯೆಯಷ್ಟೇ ಮಹತ್ವದ್ದಾಗಿವೆ. ಕೌಶಲ್ಯಾಧಾರಿತ ಜ್ಞಾನದ ಮೂಲಕ ಪ್ರತಿಯೊಬ್ಬರೂ ಜೀವನದ ಗುರಿ ತಲುಪಬೇಕೆಂದು ತಿಳಿಸಿದರು.

# ಸಹಾಯಧನ ಬಿಡುಗಡೆ

■ವಿಜಯಸಾಕ್ಷಿ ಸುದ್ದಿ, ಗದಗ

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಕೈಗಾರಿಕಾ ಒಪ್ಪಂದದಂತೆ 01-01-2020ರಿಂದ ಅನ್ವಯವಾಗುವಂತೆ ನೌಕರರ ವೇತನವನ್ನು ಶೇ.15ರಷ್ಟು ಹೆಚ್ಚಿಸಿ, ಪರಿಷ್ಕರಣೆ ಮಾಡಲಾಗಿದೆ ಹಾಗೂ 01-03-2023ರಿಂದ ಜಾರಿಗೊಳಿಸಿ ವೇತನದಲ್ಲಿ ಅನುಷ್ಠಾನ ಮಾಡಲಾಗಿದೆ.

01-01-2020ರಿಂದ 28-02-2023ರವರೆಗಿನ ಅವಧಿಯಲ್ಲಿ ಸೇವೆಯಿಂದ ಮರಣ/ಸ್ವಯಂ ನಿವೃತ್ತಿ/ವಜಾ/ನಿವೃತ್ತರಾದ ಸಂಸ್ಥೆಯ ನೌಕರರಿಗೆ ಉಪಧನ, ಗಳಿಕೆ ರಜಾ ನಗದೀಕರಣದ ವ್ಯತ್ಯಾಸದ ಮೊತ್ತ ಪಾವತಿಸುವುದು ಬಾಕಿ ಇತ್ತು. ರಾಜ್ಯ ಸರ್ಕಾರವು ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ ಸದರಿ ಅವಧಿಯಲ್ಲಿ ಸೇವಾ ವಿಮುಕ್ತಿ ಹೊಂದಿದ ಸಂಸ್ಥೆಯ ನೌಕರರಿಗೆ ಉಪಧನ, ಗಳಿಕೆ ರಜಾ ನಗದೀಕರಣದ ವ್ಯತ್ಯಾಸದ ಬಾಕಿ ಮೊತ್ತವನ್ನು ಪಾವತಿಸಲು ರೂ.51.50 ಕೋಟಿಗಳನ್ನು 19-12-2024ರಂದು ಬಿಡುಗಡೆ ಮಾಡಲಾಗಿದೆ.

ಈ ಸಹಾಯಧನದಿಂದ ಸದರಿ ಅವಧಿಯಲ್ಲಿ ಸೇವಾ ವಿಮುಕ್ತಿ ಹೊಂದಿದ ಸಂಸ್ಥೆಯ 2467 ನೌಕರರಿಗೆ ಆರ್ಥಿಕ ಅನುಕೂಲ ಆಗಲಿದ್ದು, ರಾಜ್ಯ ಸರ್ಕಾರಕ್ಕೆ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಪ್ರಿಯಾಂಗಾ ಎಂ. ಧನ್ಯವಾದಗಳನ್ನು ತಿಳಿಸಿದ್ದಾರೆ.

## ಜ್ಯೋತಿ ಸಾವಳಗಿಯವರಿಗೆ ಪಿಎಚ್‌ಡಿ

■ವಿಜಯಸಾಕ್ಷಿ ಸುದ್ದಿ, ವಿಜಯಪುರ



ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯವು ಜ್ಯೋತಿ ಸಾವಳಗಿ ಅವರು ಸಲ್ಲಿಸಿದ್ದ 'ಎ ಸ್ಟಡಿ ಆಫ್ ಕಬಡ್ಡಿ ಪ್ಲೇಯಿಂಗ್ ಎಬಿಲಿಟಿ ಆಫ್ ಸೆಲೆಕ್ಟೆಡ್ ಫಿಸಿಕಲ್, ಸೈಕಲಾಜಿಕಲ್ ಅಂಡ್ ಆಂಥ್ರೋಪೊಮೆಟ್ರಿಕ್ಸ್ ವೇರಿಯೆಬಲ್ಸ್ ಅಮಂಗ್ ಸ್ಟೇಟ್ ಲೆವೆಲ್ ವುಮೆನ್ ಕಬಡ್ಡಿ ಪ್ಲೇಯರ್ಸ್' ಮಹಾಪ್ರಬಂಧಕ್ಕೆ ಪಿಎಚ್‌ಡಿ ಪದವಿ ನೀಡಿದೆ.

ಜ್ಯೋತಿ ಸಾವಳಗಿ ಅವರು ದೈಹಿಕ ಶಿಕ್ಷಣ ಅಧ್ಯಯನ ಮತ್ತು ಕ್ರೀಡಾ ವಿಜ್ಞಾನ ವಿಭಾಗದ ಪ್ರೊ. ಜ್ಯೋತಿ ಎ.ಉಪಾಧ್ಯೆ ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ಕೈಗೊಂಡಿದ್ದರು. ಡಾಕ್ಟರೇಟ್ ಪದವಿ ಪಡೆದಿರುವ ಜ್ಯೋತಿ ಸಾವಳಗಿ ಅವರನ್ನು ಕುಲಪತಿ ಪ್ರೊ. ಬಿ.ಕೆ. ತುಳಸಿಮಾಲ, ಕುಲಸಚಿವ ಶಂಕರಗೌಡ ಸೋಮನಾಳ, ಮೌಲ್ಯಮಾಪನ ಕುಲಸಚಿವ ಪ್ರೊ. ಎಚ್.ಎಂ. ಚಂದ್ರಶೇಖರ ಅಭಿನಂದಿಸಿದ್ದಾರೆ.

# ಪಡೆದ ಸಾಲವನ್ನು ಸದುಪಯೋಗಪಡಿಸಿಕೊಳ್ಳಿ

■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಗ್ರಾಮೀಣ ಭಾಗದ ರೈತರನ್ನು ಆರ್ಥಿಕವಾಗಿ ಸದೃಢರನ್ನಾಗಿಸುವ ಉದ್ದೇಶದಿಂದ ಪ್ರಾರಂಭಗೊಂಡ ಕೃಷಿ ಪತ್ತಿನ ಸಹಕಾರಿ ಸಂಘಗಳಲ್ಲಿನ ಸಾಲ ಸೌಲಭ್ಯವನ್ನು ರೈತರು ಸದುಪಯೋಗಪಡಿಸಿಕೊಂಡು ಆರ್ಥಿಕವಾಗಿ ಸಬಲರಾಗಬೇಕು ಎಂದು ಕೋಟುಮಚಗಿ ಕೃಷಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ಪ್ರಕಾಶ ಕುಲಕರ್ಣಿ ಹೇಳಿದರು.


ಸಮೀಪದ ಕೋಟುಮಚಗಿ ಗ್ರಾಮದ ಕೃಷಿ ಪತ್ತಿನ ಸಹಕಾರಿ ಸಂಘ-2ರಲ್ಲಿ ಶುಕ್ರವಾರ ಸಂಘದ ಸದಸ್ಯರಿಗೆ ಟ್ರ್ಯಾಕ್ಟರ್ ಸಾಲ ಮಂಜೂರಾತಿ ಪತ್ರ ನೀಡಿ ಅವರು ಮಾತನಾಡಿದರು.



ನಾನಾ ಯೋಜನೆಯಡಿ ಫಲಾನುಭವಿಗಳನ್ನು ಆಯ್ಕೆ ಮಾಡಿ ಟ್ರ್ಯಾಕ್ಟರ್ ಸಾಲ, ಗೃಹಬಳಕೆ ಸಾಲ, ವ್ಯಾಪಾರಕ್ಕಾಗಿ ಸಾಲ, ಹೈನುಗಾರಿಕೆ ಅಲ್ಲದೆ ಇನ್ನಿತರ ವ್ಯಾಪರಸ್ಥರಿಗೆ ಅಗತ್ಯಕ್ಕನುಗುಣವಾಗಿ ಸಾಲವನ್ನು ಪ್ರಾಥಮಿಕ ಕೃಷಿ ಸಾಲ ಸಂಘಗಳ ಮೂಲಕ ನೀಡಲಾಗುತ್ತಿದೆ. ಇದು ಸಾಲ ಮತ್ತು ಆರ್ಥಿಕ ಸೇವೆಗಳ ಹೊರತಾಗಿ ರೈತರಿಗೆ ಮತ್ತು ಗ್ರಾಮೀಣ ಕೃಷಿ ಸಮುದಾಯಗಳಿಗೆ ಬಹು ಸೇವೆಗಳನ್ನು ಒದಗಿಸುತ್ತಿದೆ. ಪ್ರಾಥಮಿಕ ಕೃಷಿ ಸಾಲ ಸಂಘಗಳನ್ನು ಬಲಪಡಿಸುವ ಮೂಲಕ ಕೃಷಿ ಸ್ಥಿತಿಯನ್ನು ಸುಧಾರಿಸಲು, ಗ್ರಾಮೀಣ ಸಮುದಾಯಗಳನ್ನು ಉನ್ನತೀಕರಿಸಲು ಮತ್ತು ಅಂತರ್ಗತ ಆರ್ಥಿಕ ಬೆಳವಣಿಗೆಯನ್ನು ಉತ್ತೇಜಿಸುವ ಗುರಿಯನ್ನು ಹೊಂದಲಾಗಿದೆ. ಈ ಪ್ರಯತ್ನಗಳು ಬಡತನ ಕಡಿತ, ಆಹಾರ ಭದ್ರತೆ ಮತ್ತು ಕೃಷಿ ಆರ್ಥಿಕತೆಗಳಲ್ಲಿ ಸುಸ್ಥಿರ ಅಭಿವೃದ್ಧಿಗೆ ಕೊಡುಗೆ ನೀಡಬಹುದಾಗಿದೆ ಎಂದರು.

ಸಂಘದ ನಿರ್ದೇಶಕರಾದ ಪ್ರಕಾಶ ಮುಧೋಳ, ಈರಣ್ಣ ನೇಗಲಿ, ಬಸವರಾಜ ನವಲಗುಂದ, ಮಾರುತಿ ಪೂಜಾರ, ಮಲ್ಲಪ್ಪ ಇಬ್ರಾಹಿಂಪೂರ, ಚನ್ನಬಸನಗೌಡ ಸಂಕನಗೌಡ್ರ, ವೆಂಕಟೇಶ ಗೌಡರ ಇದ್ದರು. ವ್ಯವಸ್ಥಾಪಕ ಲೋಕೇಶ ಸಂಕನಗೌಡ್ರ ನಿರ್ವಹಿಸಿದರು.

# ಶರಣ ಸಂಗಮ ಕಾರ್ಯಕ್ರಮ ಇಂದು



■ ವಿಜಯಸಾಕ್ಷಿ ಸುದ್ದಿ, ಗದಗ

ಇಲ್ಲಿನ ಶಿವಾನಂದ ನಗರದ ಬಸವ ಸಮುದಾಯ ಭವನದಲ್ಲಿ ಡಿ. 22ರ ಬೆಳಿಗ್ಗೆ 11ಕ್ಕೆ ನಡೆಯಲಿರುವ ಬಸವದಳದ 1625ನೇ ಶರಣ ಸಂಗಮದಲ್ಲಿ ಬಾಲ್ಕಿಯ ಪೂಜ್ಯ ಡಾ. ಚನ್ನಬಸವ ಪಟ್ಟದೇವರು ಕುರಿತು ಉಪನ್ಯಾಸ ಹಾಗೂ ಶರಣೆ ಮೋಳಿಗೆ ಮಹಾದೇವಿಯಮ್ಮನವರ ವಚನಗಳ ಚಿಂತನೆ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ಅಧ್ಯಕ್ಷತೆಯನ್ನು ನಿವೃತ್ತ ಶಿಕ್ಷಕ, ಶರಣ ಎಸ್.ಎನ್. ಹಕಾರಿ ವಹಿಸುವರು. ಶರಣತತ್ವ ಚಿಂತಕ ಎಸ್.ಎ. ಮುಗದ ವಚನ ಚಿಂತನೆ ಹಾಗೂ ಉಪನ್ಯಾಸ ಮಾಡುವರು. ಶರಣೆ ನೀಲಲೋಚನಾ ಸಿ.ಹಂಚಿನಾಳ ಅತಿಥಿಗಳಾಗಿ ಆಗಮಿಸುವರು. ಕಾರಣ, ಬಸವದಳದ ಸದಸ್ಯರು, ಶರಣ ಸಾಹಿತ್ಯಾಭಿಮಾನಿಗಳು ಹಾಗೂ ಆಸಕ್ತರು ಭಾಗವಹಿಸಬೇಕೆಂದು ಸಂಘಟಿಕರ ಪರವಾಗಿ ಪ್ರಕಾಶ ಅಸುಂಡಿಯವರು ವಿನಂತಿಸಿದ್ದಾರೆ.

# ಅಹವಾಲು ಸಲ್ಲಿಸಲು ಅವಕಾಶ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಅರಣ್ಯ ವಿಭಾಗದ ಗದಗ ವಲಯದ ವ್ಯಾಪ್ತಿಯಲ್ಲಿ ಬರುವ ನಿರ್ದೇಶಕರು ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗದಗ ರವರು ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಆವರಣದಲ್ಲಿ 50 ಹಾಸಿಗೆಗಳ ತೀವ್ರ ನಿಗಾ ಘಟಕ ( ಸಿಸಿಯು) ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಮಾಡಲು 84 ಮರಗಳು ಅಡ್ಡಲಾಗಿವೆ.

ಈ ಮರಗಳನ್ನು ನಿಯಮಾನುಸಾರ ಕಟಾವು ಮಾಡಬೇಕಾಗಿದೆ. ಈ ಕುರಿತು ಸಾರ್ವಜನಿಕರಿಂದ ಏನಾದರೂ ಅಹವಾಲುಗಳಿದ್ದಲ್ಲಿ ಈ ಪ್ರಕಟಣೆ ಹೊರಡಿಸಿದ 10 ದಿನಗಳೊಳಗೆ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಾರ್ಯಾಲಯ, ಗದಗ ಉಪವಿಭಾಗ, ಗದಗ ಈ ಕಚೇರಿಗೆ ಅರ್ಜಿ ಸಲ್ಲಿಸಬಹುದಾಗಿದೆ.

## 'ಶಿವಾನುಭವ' ಕಾರ್ಯಕ್ರಮದಲ್ಲಿ ಡಾ. ತೋಂಟದ ಸಿದ್ಧರಾಮ ಮಹಾಸ್ವಾಮಿಗಳು

# ಆತ್ಮ ಕಲ್ಯಾಣದೊಂದಿಗೆ ಸಮಾಜ ಕಲ್ಯಾಣವೂ ಮುಖ್ಯ

■ ವಿಜಯಸಾಕ್ಷಿ ಸುದ್ದಿ, ಗದಗ

ವ್ಯಸನರಹಿತ ಸಮಾಜ, ಮೂಢನಂಬಿಕೆ, ಅಂಧಶ್ರದ್ಧೆ, ಶೋಷಣೆಮುಕ್ತ ಸಮಾಜ ಶರಣರ ಪ್ರಗತಿಪರ ಚಿಂತನೆಗಳಾಗಿದ್ದವು. ಶರಣರ ವಚನಗಳಲ್ಲಿ ಸಾಮಾಜಿಕ ಪ್ರಜ್ಞೆ ಇದೆ. ವಚನಕಾರರ ದೃಷ್ಟಿಕೋನ ಆತ್ಮಕಲ್ಯಾಣದ ಜೊತೆಗೆ ಸಮಾಜ ಕಲ್ಯಾಣವಾಗಿತ್ತು ಎಂದು ಪೂಜ್ಯ ಡಾ. ತೋಂಟದ ಸಿದ್ಧರಾಮ ಮಹಾಸ್ವಾಮಿಗಳು ಹೇಳಿದರು.

ಲಿಂಗಾಯತ ಪ್ರಗತಿಶೀಲ ಸಂಘದ 2724ನೇ ಶಿವಾನುಭವದ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡುತ್ತಿದ್ದರು.

ತಾತ್ವಿಕ ಚಿಂತನೆಯನ್ನು ಉಪನಿಷತ್ತುಗಳು ಮಾಡಿದರೆ, ವಚನಗಳು ತಾತ್ವಿಕತೆಯ ಜೊತೆಗೆ ಸಾಮಾಜಿಕ ಚಿಂತನೆ ಮಾಡಿದವು. ವೇದಗಳಲ್ಲಿ ಹೇಳಿದ್ದನ್ನು ಪಾಲನೆ ಮಾಡುವುದು ಬಲಪಂಥೀಯವಾದರೆ, ಅದನ್ನು ವಿಶ್ಲೇಷಣೆ ಮಾಡಿ ಸರಿಯಾದುದರ ಬಗ್ಗೆ ಸಮಾಜದಲ್ಲಿ ತಿಳಿಸಿ ಜನಮನದಲ್ಲಿ ಜಾಗೃತಿ ಮೂಡಿಸಿದವರು ಶರಣರು. ಸಮಾಜ ಸೇವೆ ಮನುಷ್ಯರ ಕರ್ತವ್ಯವಾಗಬೇಕು ಎಂಬುದೇ ಪ್ರಗತಿಪರ ಚಿಂತನೆಯಾಯ್ತು. ವಚನಗಳು ಸಮಾಜದಲ್ಲಿ ಬದುಕುವ ಮಾರ್ಗ ತೋರಿಸುತ್ತವೆ. ವಚನಗಳು ಸಾಮಾಜಿಕ ನ್ಯಾಯವನ್ನು ಒದಗಿಸುತ್ತವೆ ಎಂದರು.



ರಮಣಶ್ರೀ ಶರಣ ಉತ್ತೇಜನ ಪ್ರಶಸ್ತಿ ಪಡೆದ ಕೆ.ಎಲ್.ಇ. ಸಂಸ್ಥೆಯ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದ ಉಪನ್ಯಾಸಕರಾದ ಡಾ. ಅಂದಯ್ಯ ಅರವಟಗಿಮಠ ಇವರನ್ನು ಸನ್ಮಾನಿಸಲಾಯಿತು.

ಮೃತ್ಯುಂಜಯ ಹಿರೇಮಠ ಹಾಗೂ ಗುರುನಾಥ್ ಸುತಾರ ಸಂಗೀತ ಸೇವೆ ನೇರವೇರಿಸಿದರು. ಧರ್ಮಗ್ರಂಥ ಪಠಣವನ್ನು ರೇಣುಕಾ ಲಿಂಗರಾಜ ಅಮಾತ್ಯ, ವಚನ ಚಿಂತನವನ್ನು ವಿಜಯಶ್ರೀ ಕಾಶಪ್ಪ ಇಲಕಲ್ ಇವರುಗಳು ನಡೆಸಿಕೊಟ್ಟರು. ದಾಸೋಹ ಸೇವೆಯನ್ನು ಕೆ.ಎಸ್. ನಾಗರಾಜ ಹಾಗೂ ಸಹೋದರರು, ವೀರಭದ್ರಪ್ಪ ಸಂಗಪ್ಪ & ಕಂಪನಿ ವೆಸ್ಕೋಹೌಸ್ ಸೊಂಡೂರು ಇವರ ಪರವಾಗಿ ಸಾವೆಂತ್ರವ್ವ ಪಿಳ್ಳಿ ಇವರು ಉಪಸ್ಥಿತರಿದ್ದರು.

> ಉಪನ್ಯಾಸಕರಾಗಿ ಆಗಮಿಸಿದ ಗದುಗಿನ ಸರಕಾರಿ ಪ್ರಥಮದರ್ಜೆ ಮಹಿಳಾ ಕಾಲೇಜಿನ ಪ್ರಾಧ್ಯಾಪಕರಾದ ಸಿದ್ದಲಿಂಗೇಶ ಸಜ್ಜನಶೆಟ್ಟರ ಮಾತನಾಡಿ, ಉಪನಿಷತ್‌ಗಳಲ್ಲಿ ಇರುವುದೆಲ್ಲ ವಚನಗಳಲ್ಲಿ ಇದೆ. ಆದರೆ ವಚನಗಳಲ್ಲಿ ಇರುವುದೆಲ್ಲ ಉಪನಿಷತ್‌ಗಳಲ್ಲಿ ಇಲ್ಲ. ಶರಣರು ನುಡಿದಂತೆ ನಡೆದು ಕಾಯಕಸಿದ್ಧಾಂತ ಮತ್ತು ಮಾನವೀಯ ಮೌಲ್ಯಗಳನ್ನು ಸಮಾಜಕ್ಕೆ ನೀಡಿದ್ದಾರೆ ಎಂದು ಹೇಳಿದರು.

ಲಿಂಗಾಯತ ಪ್ರಗತಿಶೀಲ ಸಂಘದ ಅಧ್ಯಕ್ಷರಾದ ಬಾಲಚಂದ್ರ ಭರಮಗೌಡ್ರ, ಕಾರ್ಯದರ್ಶಿಗಳಾದ ವೀರಣ್ಣ ಗೋಟಡಕಿ ಹಾಗೂ ಸರ್ವ ಸದಸ್ಯರು ಉಪಸ್ಥಿತರಿದ್ದರು.

ಪ್ರೊ. ಶಿವಾನಂದ ಹೊಂಬಳ ಸ್ವಾಗತಿಸಿದರೆ, ಶಿವಾನುಭವ ಸಮಿತಿಯ ಚೇರಮನ್ ಐ.ಬಿ. ಬೆನಕೊಪ್ಪ ಪರಿಚಯಿಸಿದರು. ವಿದ್ಯಾ ಪ್ರಭು ಗಂಜಿಹಾಳ ನಿರೂಪಿಸಿದರು.

# ಅಂಬೇಡ್ಕರರಿಗೆ ಅವಮಾನ ಮಾಡಿದವರಿಗೆ ಶಿಕ್ಷೆಯಾಗಲಿ

■ ವಿಜಯಸಾಕ್ಷಿ ಸುದ್ದಿ, ಗದಗ



ಸಂವಿಧಾನ ಶಿಲ್ಪಿ ಡಾ. ಬಾಬಾಸಾಹೇಬ ಅಂಬೇಡ್ಕರರಿಗೆ ಅವಮಾನ ಮಾಡಿದ ಕೇಂದ್ರ ಗೃಹ ಸಚಿವ ಅಮಿತ ಶಾ ಅವರನ್ನು ಸಚಿವ ಸ್ಥಾನದಿಂದ ಕೈಬಿಡಲು ಹಾಗೂ ಬೆಳಗಾವಿ ಸುವರ್ಣಸೌಧದಲ್ಲಿ ಸಚಿವರಾದ ಲಕ್ಷ್ಮೀ ಹೆಬ್ಬಾಳ್ಕರರಿಗೆ ಅವಹೇಳನಕಾರಿಯಾಗಿ ಮಾತನಾಡಿದ ಸಿ.ಟಿ. ರವಿಯವರನ್ನು ವಿಧಾನಪರಿಷತ್ ಸ್ಥಾನದಿಂದ ಕೈಬಿಟ್ಟು, ಈ ಇಬ್ಬರು ಮುಖಂಡರಿಗೆ ಸೂಕ್ತ ಕಾನೂನು ಶಿಕ್ಷೆ ನೀಡಲು ಒತ್ತಾಯಿಸಿ ನಗರದ ಮಹಾತ್ಮ ಗಾಂಧೀಜಿ ವೃತ್ತದಲ್ಲಿ ಸಿಐಟಿಯು ನೇತೃತ್ವದಲ್ಲಿ ಪ್ರತಿಭಟನೆ ಮಾಡಲಾಯಿತು.

ಈ ಪ್ರತಿಭಟನೆಯಲ್ಲಿ ಸಿಐಟಿಯು ಜಿಲ್ಲಾ ಮುಖಂಡರಾದ ಸುಮಂಗಲಾ ಗದಗ, ವಿಜಯಲಕ್ಷ್ಮೀ ಚಲವಾದಿ, ಜನ್ನೂಬಿ ಹಣಗಿ ಮಾತನಾಡಿದರು. ಹೋರಾಟದಲ್ಲಿ ಸುಶೀಲಾ ಚಲವಾದಿ, ಅನ್ನಪೂರ್ಣ ಸಾಲಿಮಠ, ಸುಮಂಗಲಾ ಗದಗ, ಶೈಲಜಾ ಕೊಂಕಲ್, ಮಹೇಶ ಹಿರೇಮಠ, ಮಾರುತಿ ಚಿಟಗಿ, ದೇವಪ್ಪ ಕಲ್ಮನಿ, ಮುತ್ತಪ್ಪ ಚಲವಾದಿ, ಜಯಶ್ರೀ ರಾಮನಗೌಡರ, ಈರಮ್ಮ ಸಂಗಟಿ, ಶೋಭಾ ಶಿರನಳ್ಳಿ, ಮಂಜುಳಾ ಚಲವಾದಿ, ರೇಖಾ ಆಲಂನವರ, ಪ್ರೇಮಾ ಪೂಜಾರ, ನರಸಮ್ಮ, ಎಸ್.ಡಿ. ಪೂಜಾರ, ಎಸ್. ಆರ್. ಅಂಗಡಿ, ರೇಣುಕಾ ತಳವಾರ, ಸವಿತಾ, ಕಲ್ಯಾಣಿ, ಜಯಶ್ರೀ ಹಿರೇಗೌಡರ, ಬಿ.ಬಿ. ಗೌಡಪ್ಪನವರ, ಅಕ್ಕಮ್ಮ ನಿರ್ಲೊಟ್ಟಿ, ಶೈಲಾ ರೊಡ್ಡನವರ, ಗಂಗಾ ಹರ್ತಿ ಉಪಸ್ಥಿತರಿದ್ದರು.

# ಭಾವನೆಗಳ ನಿರ್ವಹಣೆಯೇ ಜೀವನ ಕೌಶಲ್ಯ

■ ವಿಜಯಸಾಕ್ಷಿ ಸುದ್ದಿ, ಗದಗ



ಆರೋಗ್ಯಯುತ ಜೀವನ ನಡೆಸಲು ಸತ್ವಯುತ ಆಹಾರ ಹಾಗೂ ವ್ಯಾಯಾಮ ಎಷ್ಟು ಮುಖ್ಯವೋ ಅಷ್ಟೇ ನಮ್ಮ ಭಾವನೆಗಳ ನಿಯಂತ್ರಣವೂ ಸಹ ಮುಖ್ಯವಾಗಿದೆ ಎಂದು ಎನ್‌ಎಸ್‌ಎಸ್ ಗದಗ ಜಿಲ್ಲಾ ನೋಡಲ್ ಅಧಿಕಾರಿ ಶ್ರೀನಿವಾಸ್ ಬಡಿಗೇರ ನುಡಿದರು.

ಶಿರಹಟ್ಟಿ ಸರಕಾರಿ ಪದವಿಪೂರ್ವ ಕಾಲೇಜಿನಲ್ಲಿ ಜೀವನ ಕೌಶಲ್ಯ ತರಬೇತಿ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಅವರು ರಾಷ್ಟ್ರೀಯ ಸೇವಾ ಯೋಜನೆಯ ವಿದ್ಯಾರ್ಥಿಗಳಿಗೆ ತರಬೇತಿ ನೀಡಿ ಮಾತನಾಡಿದರು.

ನಮ್ಮ ಮಾನಸಿಕ ಆರೋಗ್ಯಕ್ಕೆ ಅತಿ ಮುಖ್ಯವಾಗಿ ನಮ್ಮ ಭಾವನೆಗಳನ್ನು ನಿಯಂತ್ರಿಸುವುದು ಅವಶ್ಯವಾಗಿದೆ. ಜೀವನ ಕೌಶಲ್ಯದ ಯಶಸ್ಸು ಇದರಲ್ಲಿಯೇ ಇದೆ ಎಚಿದರಲ್ಲದೆ, ಚೈನಿಸ್ ವಿಸ್ಪರ್, ಕಥೆ ಹೇಳುವುದು, ರೋಲ್ ಪ್ಲೇಯಿಂಗ್, ಬಲೂನ್ ಗೇಮ್‌ಗಳ ಮುಖಾಂತರ ಮಕ್ಕಳಲ್ಲಿ ಅಡಗಿರುವ ಪ್ರತಿಭೆಯನ್ನು ಪ್ರದರ್ಶಿಸಲು ಶ್ರೀನಿವಾಸ್ ಅವಕಾಶ ಮಾಡಿಕೊಟ್ಟರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬಸವರಾಜ್ ಗಿರಿತಿಮ್ಮಣ್ಣವರ ವಹಿಸಿದ್ದರು. ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಲಿಂಗರಾಜ್ ಯತ್ನಲ್ಲಿ ಸ್ವಾಗತಿಸಿದರು. ಕಿರಣ್ ಕಮಾರ್ ಸಭೆಯನ್ನುದ್ದೇಶಿಸಿ ಮಾತನಾಡಿದರು. ಬೀರೇಶ ಘಂಟಿ ಕಾರ್ಯಕ್ರಮ ನಿರೂಪಿಸಿದರು. ಕಿರಣ್ ಹೂಗಾರ್ ವಂದಿಸಿದರು.

# ವಿದ್ಯಾರ್ಥಿಗಳ ಗಮನಕ್ಕೆ

■ ವಿಜಯಸಾಕ್ಷಿ ಸುದ್ದಿ, ಗದಗ

2024-25ನೇ ಸಾಲಿನ ಎರಡು ವರ್ಷದ ಬಿ.ಇಡಿ ಕೋರ್ಸಿನ ದಾಖಲಾತಿ ಪರಿಶೀಲನೆಯ ಪ್ರವೇಶ ಪ್ರಕ್ರಿಯೆಯ 2ನೇ ಸುತ್ತಿನ ಸೀಟು ಹಂಚಿಕೆ ಡಿಸೆಂಬರ್ 23 ರಿಂದ 27 ವರೆಗೆ ನಡೆಯುವುದು ಹಾಗೂ ಮೊದಲನೇ ಸುತ್ತಿನಲ್ಲಿ ಮೂಲದಾಖಲೆಗಳ ಪರಿಶೀಲನೆಗೆ ಗೈರು ರಾಜರಾಗುವ ಅಭ್ಯರ್ಥಿಗಳಿಗೆ ಡಿಸೆಂಬರ್ 23 ರಿಂದ ಡಿಸೆಂಬರ್ 26 ವರೆಗೆ ದಾಖಲೆಗಳ ಪರಿಶೀಲನೆಗೆ ಕೊನೆಯ ದಿನಾಂಕವಾಗಿದೆ. ಆಯ್ಕೆಯಾದ ಅಭ್ಯರ್ಥಿಗಳು ನಗರದ ಕಳಸಾಪುರ ರೋಡ್‌ನಲ್ಲಿರುವ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗೆ ಮೂಲ ದಾಖಲೆಗಳೊಂದಿಗೆ ಮತ್ತು ಒಂದು ಸೆಟ್ ಜೆ-ರಾಕ್ಸ್ ಪ್ರತಿಯೊಂದಿಗೆ ಹಾಜರಾಗಿ ದಾಖಲೆಗಳ ಪರಿಶೀಲನೆ ಮಾಡಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ www.schooleducation.kar.nic.in ಜಾಲತಾಣವನ್ನು ಹಾಗೂ ಡಯಟ್ ನೋಡಲ್ ಅಧಿಕಾರಿ ಜಿ ಎಂ ಮುಂದಿನಮನಿ ಮೊಬೈಲ್‌ಸಂ: 7619277145 ಸಂಪರ್ಕಿಸಬಹುದಾಗಿದೆ.


ಕರ್ನಾಟಕ ಸರ್ಕಾರ

**ಗ್ರಾಮ ಪಂಚಾಯತ ಕಾರ್ಯಾಲಯ ಕದಾಂಪೂರ- 582103**

ತಾಲೂಕ: ಮುಂಡರಗಿ ಜಿಲ್ಲಾ: ಗದಗ

ಇ-ಮೇಲ್:mun.singtarayana.gdg@gmail.com

ಸಂ.ಗ್ರಾ.ಪಂ.ಕ/ಮ.ಗಾಂ.ರಾ.ಗ್ರಾ.ಉ.ಖಾ.ಯೋಜನೆ/ದರಪಟ್ಟಿ/2024-25 ದಿನಾಂಕ: 16/12/2024

**ದರಪಟ್ಟಿ ಪ್ರಕಟಣೆ**

ಅಧ್ಯಕ್ಷರು/ಅಭಿವೃದ್ಧಿ ಅಧಿಕಾರಿಗಳು ಗ್ರಾಮ ಪಂಚಾಯತ ಕದಾಂಪೂರ ಇವರು 2024-25ನೇ ಸಾಲಿನ ಮಹಾತ್ಮಗಾಂಧೀ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ಈ ಕೆಳಕಂಡ ಕಾಮಗಾರಿಗಳಿಗೆ ಅವಶ್ಯಕವಿರುವ ಐಟಂವಾರು ಸಾಮಗ್ರಿ ಮೊತ್ತಕ್ಕೆ ಸಾಮಗ್ರಿಗಳನ್ನು ಪೂರೈಸಲು ನೋಂದಾಯಿತ ಅರ್ಹ ಟೆಂಡರ್/ಏಜೆನ್ಸಿಗಳಿಂದ ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ. ಸದರಿ ಕಾಮಗಾರಿಗಳಿಗೆ ದರಪಟ್ಟಿ ಸಲ್ಲಿಸುವವರು ಗ್ರಾಮ ಪಂಚಾಯತಿಯಿಂದ ಖುದ್ದಾಗಿ ಖಾಲಿ ಟೆಂಡರ್ ಫಾರ್ಮಗಳನ್ನು ಪಡೆದು ಸಲ್ಲಿಸತಕ್ಕದ್ದು.

| ಕ್ರ. ಸಂ. | ಕಾಮಗಾರಿಗಳ ಹೆಸರು | ಟೆಂಡರ್ ಮೊತ್ತ | ಖಾಲಿ ಟೆಂಡರ್ ಫಾರ್ಮ ಬೆಲೆ (ರೂ.ಗಳಲ್ಲಿ) | ಷರಾ |
|---|---|---|---|---|
| 1 | ಕದಾಂಪೂರ ಗ್ರಾಮದ ಮಲ್ಲವ್ವ ಸಂಕಣ್ಣವರ ಮನೆಯಿಂದ ಬಸವರಾಜ ವಡ್ಡಟ್ಟಿ ಮನೆಯವರೆಗೆ ಸಿ ಸಿ ರಸ್ತೆ ನಿರ್ಮಾಣ | 336674.56 | 500.00 | ಖಾಲಿ ಟೆಂಡರ್ ಫಾರ್ಮ ಅನ್ನು ಗ್ರಾಮ ಪಂಚಾಯತಿಯಿಂದ ಪಡೆದು ಸಲ್ಲಿಸುವುದು |

ಅರ್ಹ ವೆಂಡರ್/ಏಜೆನ್ಸಿಗಳಿಂದ ಖಾಲಿ ದರಪಟ್ಟಿ ಫಾರ್ಮಗಾಗಿ ಅರ್ಜಿ ಸ್ವೀಕರಿಸುವ ದಿನಾಂಕ: **17/12/2024** ರಿಂದ **22/12/2024** ರವರೆಗೆ ಭರ್ತಿ ಮಾಡಿದ ದರಪಟ್ಟಿಗಳನ್ನು ಸ್ವೀಕರಿಸುವ ದಿನಾಂಕ: **23/12/2024** ಮುಂಜಾನೆ 10.00ಗಂಟೆಯಿಂದ ಮಧ್ಯಾಹ್ನ 2.30 ಗಂಟೆವರೆಗೆ. ಟೆಂಡರ್ ತೆರೆಯುವ ದಿನಾಂಕ ಹಾಗೂ ಸಮಯ: **23/12/2024** ರ ಮಧ್ಯಾಹ್ನ 3.00ಗಂಟೆ. **ನಿಬಂಧನೆಗಳು:** ಷರತ್ತು/ನಿಬಂಧನೆಗಳಿಗೆ, ಹಾಗೂ ಹೆಚ್ಚಿನ ಮಾಹಿತಿಗಾಗಿ ಕೆಲಸದ ದಿನಗಳಲ್ಲಿ ಗ್ರಾಮ ಪಂಚಾಯತ ಕದಾಂಪೂರದಿಂದ ಮಾಹಿತಿ ಪಡೆಯಬಹುದಾಗಿದೆ.

ಸಹಿ/- ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಗ್ರಾಮ ಪಂಚಾಯತಿ ಕದಾಂಪೂರ

ಸಹಿ/- ಅಧ್ಯಕ್ಷರು ಗ್ರಾಮ ಪಂಚಾಯತಿ ಕದಾಂಪೂರ

ವಾ.ಸಾ.ಇ/ಗದಗ/479/ದೇಶಪಾಂಡೆಪಬ್ಲಿಸಿಟಿ/2024-25



**ಪುರಸಭೆ ಕಾರ್ಯಾಲಯ, ಮುಂಡರಗಿ**

ನಂ.: ಪುಸಮುಂ/ನೀರು ಸರಬರಾಜು ವಿಭಾಗ/ದರಪಟ್ಟಿ/2024-25 ದಿನಾಂಕ:16-12-2024

**ಕೊಟೇಶನ ಪ್ರಕಟಣೆ**

ಈ ಕೊಟೇಶನ್ ಪ್ರಕಟಣೆಯ ಮೂಲಕ ಪ್ರಕಟಪಡಿಸುವುದೇನೆಂದರೆ, ಮುಂಡರಗಿ ಪುರಸಭೆ ವ್ಯಾಪ್ತಿಯ ನೀರು ಸರಬರಾಜು ವಿಭಾಗದ ಪೈಪಲೈನ ದುರಸ್ಥಿಗೆ, ವಾಲ್ವಗಳ ದುರಸ್ಥಿಗೆ, ಸಬ್ ಮರಶೀಬಲ್ ಮತ್ತು ಮನೋಬ್ಲಾಕ್ ಮೋಟಾರಗಳ ದುರಸ್ಥಿ ಸಾಮಾಗ್ರಿಗಳ ಖರೀದಿಸಲು ಅಂದಾಜು ಪಟ್ಟಿ ತಯಾರಿಸಿಕೊಂಡು ಇ-ಟೆಂಡರ ಕರೆಯಲು ಮಾರುಕಟ್ಟೆಯ ದರಪಟ್ಟಿ ಅವಶ್ಯಕವಾಗಿ ಬೇಕಾಗಿದ್ದು ಕಾರಣ ಆಸಕ್ತಿಯುಳ್ಳ ಸರಬರಾಜುದಾರರು/ ಪೂರೈಕೆದಾರರು/ದುರಸ್ಥಿದಾರರು ಈ ಕೆಳಗೆ ಕಾಣಿಸಿದ ಸಾಮಾಗ್ರಿಗಳಿಗೆ ತಮ್ಮ ತಮ್ಮ ದರಗಳನ್ನು ಶೀಲಬಂದ ಲಕೋಟೆಯಲ್ಲಿ **ದಿನಾಂಕ: 24-12-2024 ರ ಸಂಜೆ 4.00 ಗಂಟೆ** ಒಳಗಾಗಿ ಕೊಟೇಶನ ದರಗಳನ್ನು ಸಲ್ಲಿಸಲು ಕೋರಲಾಗಿದೆ.

| Sl. No. | Item | Qty | Rate |
|---|---|---|---|
| 1 | PVC ELBO 1.50 Inch | 1 | |
| 2 | PVC Ewlbo 1 1.4 Inch | 1 | |
| 3 | PVC Reducer ISI1 X 2A | 1 | |
| 4 | Submerciable Power Pump I to 2 Hp Singh Phase | 1 | |
| 5 | PVC Pipe ISI Mark I 5 kg 1 Inch | 1 | |
| 6 | GI Cock ISI 1 Inch | 1 | |
| 7 | PVC Collar Molded 1 Inch | 1 | |
| 8 | PVC End Cap ISI 1 Inch | 1 | |
| 9 | PVC pipe ISI Mark 6 Kg 1 Inch | 1 | |
| 10 | PVC Tee Modlded 1 Inch | 1 | |
| 11 | VC Reduser ISI 1 Inchx IA 1.4 A 1 inch | 1 | |
| 12 | reducer elbow PVC ISI 1 Inch x 1.4 inch | 1 | |
| 13 | PVC Adapted Male 1 Inch | 1 | |
| 14 | PVC Bend 1.2 X 90 inch | 1 | |
| 15 | A PVC Ewlbo 0.5 inch | 1 | |
| 16 | GI union ISI 0.5 inch | 1 | |
| 17 | GI Cock ISI 1 Inch | 1 | |
| 18 | GI Collar ISI 0.5 inch | 1 | |
| 19 | PVC Collar Molded 0.5 inch | 1 | |
| 20 | PVC F.lwbo 6kg ISI 0.5 Inch | 1 | |
| 21 | PVC Tee Modldcd 0.5 inch | 1 | |
| 22 | PVC saddle ISI 0.5 x 2.5 inch | 1 | |
| 23 | PVC Adapted Male 0.5 inch | 1 | |
| 24 | PVC saddle ISI 0.5 inch x2.5 inch | 1 | |
| 25 | PVC saddle ISI 0.5 inch x 3 inch | 1 | |
| 26 | PVC saddle ISI 0.5 inch x4 inch | 1 | |
| 27 | PVC saddle ISI 0.5 inch x6 inch | 1 | |
| 28 | PVC Pipe ISI Mark 6 Kg 0.5 inch | 1 | |
| 29 | 10 MM aluminium wire | 1 | |
| 30 | 10 to 14 Hp 3Phase Monoblock Pump set 12 stage | 1 | |
| 31 | 1 00 Amps Load limiter 3phase | 1 | |
| 32 | 1OOMM CI Valve KartarISI | 1 | |
| 33 | 1OHp Phase Submerciable Power Pump 12 stage Suguna Yguard | 1 1 | |
| 34 | 12 No GI wire ISI Mark | 1 | |
| 35 | full faded nut bolt 12 x I50 MM | 1 | |
| 36 | 4 Hp 3Phase Submerciablc Power Pump 12 stage Suguna Vguard | 1 1 | |
| 37 | 150 MM CI Valve Kartar ISI | 1 | |
| 38 | 16 No GI wire ISI Mark | 1 | |
| 39 | VICTP switch unit 16 inch x 415 | 1 | |
| 40 | 180mm PVC End Cap | 1 | |
| 41 | 180mm PVC Tee 6Kg | 1 | |
| 42 | APVC Adapter 4kg 1.4 inch | 1 | |
| 43 | G I union ISI 1.4 inch | 1 | |
| 44 | third adapter APVC ISI 1.1.4 inch | 1 | |
| 45 | 4 inch PVC Adapter 6kg | 1 | |
| 46 | 4 inch PVC I3cnd ISI Mark | 1 | |
| 47 | 4 inch PVC Collar Molded | 1 | |
| 48 | APVC Reduscr 1SI 1 4 inch x 1.5inch | 1 | |
| 49 | third adap1cr APVC 1SI 1.5 inch | 1 | |
| 50 | J PVC Reduser ISI 1.5 inch x 2 inch | 1 | |
| 51 | PVC Reducer ISI 2 0.5 X 2 inch | 1 | |
| 52 | 2 lip Single Phase Stater Set ISI Mark | 1 | |
| 53 | 2 inch 0 5 A PVC Pipe ISI Mark 15 kg | 1 | |
| 54 | 2 inch A PVC Pipe ISI Mark 15 kg | 1 | |
| 55 | 2 inch APVC Adar,ter 4kg | 1 | |
| 56 | 2inch APVC End Cap | 1 | |
| 57 | 2inch GI Pipe ISI | 1 | |
| 58 | 2inch GI Plastic Valve | 1 | |
| 59 | 2inch GI union ISI | 1 | |
| 60 | 2inch GM Gate Valve | 1 | |
| 61 | 2inch PVC Dend ISI Mark | 1 | |
| 62 | 2inch PVC Collar Molded | 1 | |
| 63 | 2inch PVC Elwbo 61-.g ISI | 1 | |
| 64 | 2inch PVC End Cap ISI | 1 | |
| 65 | 2inch PVC Leakage coupler finokx | 1 | |
| 66 | 2inch PVC Pipe ISI Marl 6 Kg | 1 | |
| 67 | 2inch PVC Tee Modldcd | 1 | |
| 68 | 2inch non return val c Kar1ar ISI | 1 | |
| 69 | APVC Rcduser ISI 2inch x 2 0.5 | 1 | |
| 70 | PVC rcducer elbow J I 2inch x 2 0.5 | 1 | |
| 71 | PVC tc ISI 2 inch x 2 0.5 | 1 | |
| 72 | 2inch PVC Adapted Male | 1 | |
| 73 | 2 5 Finolex Cable wire | 1 | |
| 74 | 200 MM CI Valve Kanar I I | 1 | |
| 75 | 205 inch APVC Adapter 4kg | 1 | |
| 76 | 2 05 inch PVC End Cap 4kg ISI Finolex | 1 | |
| 77 | 2 0.5 inch Ci Valve ISI | | |
| 78 | PVC tcllpice ISI 2 0.5 inch x 3 inch | 1 | |
| 79 | 3 I Ip Single Phase Submerciable Power Pump | 1 | |
| 80 | 3 inch A PVC Pipe ISI Mark 6 kg | 1 | |
| 81 | 3inch CI Valve ISI | 1 | |
| 82 | 3 inch CI kartar sluice valve ISI | 1 | |
| 83 | 3 inch GM Gate Valve ISI | 1 | |
| 84 | 3 inch PVC Adapter 6kg | 1 | |
| 85 | 3 inch PVC Bend ISI Mark | 1 | |
| 86 | 3 inch PVC Collar Molded | 1 | |
| 87 | 3 inch PVC Elwbo 6kg ISI | 1 | |
| 88 | 3 inch PVC End Cap ISI | 1 | |
| 89 | 3 inch PVC Leakage coupler finolex | 1 | |
| 90 | 3 inch PVC Pipe ISI Mark 6 Kg | 1 | |
| 91 | 3inch PVC Tee Modlded | 1 | |
| 92 | PVC reducer elbow ISI 3 inch x 4 inch | 1 | |
| 93 | Reducer Collar ISI 3 inch x 4 inch | 1 | |
| 94 | tellapice PVC ISI 3 inch x 4inch | 1 | |
| 95 | 4 inch PVC Elwbo 6kg ISI | | |
| 96 | 4 inch PVC End Cup 6kg Finolcxs | | |
| 97 | 4 inch PVC Leakage coupler linolex | | |
| 98 | 4 inch PVC Pipe ISI Mark 6 Kg | | |
| 99 | 4 inch PVC Tee Modlded | | |
| 100 | tellapice PVC ISI 4inch x 4inch | | |
| 101 | PVC reducer elbow ISI 4inch x 4inch | | |
| 102 | 4 inch PVC Adapted Male | | |
| 103 | 4 inch PVC Adapted Male | | |
| 104 | 4 MM Finolex Cable Wire | | |
| 105 | 4amps X 3 inchA PVC Reducer ISI | | |
| 106 | 6 Hp Single Phase Submersible Power Pump 12 stage | | |
| 107 | 6 X 4inch PVC Reducer ISI | | |
| 108 | 6 to 7.5 Hp Single Phase Stater Set ISI Mark | | |
| 109 | 6 inch CJ kartar sluice valve ISI | | |
| 110 | 6 inch M S Oange ISI | | |
| 111 | 6 inch PVC Adapter 6kg | | |
| 112 | 6 inch PVC Bend ISI Mark | | |
| 113 | 6 inch PVC Collar Molded | | |
| 114 | 6 inch PVC Elwbo 6kg ISI | | |
| 115 | 6 inch PVC End Cap 6kg Finolexs | | |
| 116 | 6 inch x 6 inch PVC reducer elbow ISI | | |
| 117 | 6 inch x 6inch Tellapice PVC ISI | | |
| 118 | 6 inch PVC Adapted Male | | |
| 119 | 6 InchX 45Inch PVC Bend ISI Mark | | |
| 120 | 63 Amps Load limiter | | |
| 121 | 63 Amps T P Set | | |
| 122 | Solvent Cement. | | |
| 123 | Three phase 10 H.P submersible power pump sets ISI Mark | | |
| 124 | Three phase 5 H.P sub mercible power pump sets. ISI Mark | | |
| 125 | Three phnse 6 H.P sub mercible power pump sets. ISI Mrak | | |
| 126 | bearing grease | | |
| 127 | rubber packing | | |
| 128 | 1.4 inch APVC thread adapter | | |
| 129 | 1.4 inch x 1 inch APYC Ikduser ISI | | |
| 130 | 90 mm GI Pipe | | |
| 131 | 3inchPVC Adapted Male | 1 | |
| 132 | MS Penal Board Box | 1 | |
| 133 | 320 Copper Wire | 1 | |
| 134 | 3 4 inch GI Pipe ISI | 1 | |
| 135 | A PVC Bend 3.4 X 90 inch | 1 | |
| 136 | 3 4c inch APVC Pipe 6kg ISI Finolex | 1 | |
| 137 | 3 4inch PVC Bend ISI Mark | 1 | |
| 138 | 3 4inch PVC Collar Molded | 1 | |
| 139 | 3 4inch PVC Pipe ISI Mark 1O Kg | 1 | |
| 140 | 300 MM Legs ISI Mark | 1 | |
| 141 | 32 amps 415 V.I.C.T.P switch unit | 1 | |
| 142 | 32 amps x 3 P.H MCB | 1 | |
| 143 | 4 inch A PVC Bend | 1 | |
| 144 | 4 inch CI kartar sluice valve ISI | 1 | |
| 145 | 4 inch M Oange ISI | 1 | |
| 146 | 6A switch socket, indicator and bell bush | | |
| 147 | 7.5 Hp 3Phase Submcrciablc Power Pump 12 stage | | |
| 148 | 7 20 Copper wire | | |
| 149 | 75 MM CI Coller ISI Mark | | |
| 150 | 8 to 15 HP Preventer | | |
| 151 | 8 Inch PVC End Cap 6Kg | | |
| 152 | 8Inch PVC End Cap ISI | | |
| 153 | 8 Inch PVC Leakage coupler finolex | | |
| 154 | 8Inch PVC Tee Modlded | | |
| 155 | 8Inch PVC Adapted Male | | |
| 156 | 8InchX 90Inch PVC Bend ISI Mark | | |
| 157 | 80MM CI Valve Kanar ISI | | |
| 158 | LTLK 13 lo 21 Staler Rile | | |
| 159 | LTLK 9 to I4 Stater Rile | | |
| 160 | LTLK Contractor | | |
| 161 | Three phase 7.5 H.P subrnerciblc power pump sets ISI Mark | | |
| 162 | 90mm L1:aka coupler PVC | | |
| 163 | 90mm PVC Bend 6kg | | |
| 164 | 80mm G M Gate Valve II | | |
| 165 | 80mm Slave Valve | | |

ಸಹಿ/- ಮುಖ್ಯಾಧಿಕಾರಿ ಪುರಸಭೆ ಮುಂಡರಗಿ

ವಾ.ಸಾ.ಇ/ಗದಗ/475/ದೇಶಪಾಂಡೆಪಬ್ಲಿಸಿಟಿ/2024-25


VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka